# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕಃ 10–05–2016ರಂದು ನಡೆದ ಸಭೆಯ ನಡವಳಿಗಳು

| ಹಾಜರಿದ್ದ ಸದಸ್ಯರುಗಳು | ಹಾಜರಿದ್ದ ಅಧಿಕಾರಿಗಳು |
|---|---|
| **ಶ್ರೀಯುತರುಗಳಾದ :** | |
| ಎಮ್. ಶಿವರಾಜು – ಅಧ್ಯಕ್ಷರು | ಕೌನ್ಸಿಲ್ ಕಾರ್ಯದರ್ಶಿ, |
| ವಿ.ವಿ.ಪಾರ್ತಿಬರಾಜನ್ – ಸದಸ್ಯರು | ಅಪರ ಆಯುಕ್ತರು (ಪೂರ್ವ) ಪ್ರಭಾರ (ಕಲ್ಯಾಣಾಧಿಕಾರಿ), |
| ಆರ್.ಪದ್ಮಾವತಿ ಅಮರ್‌ನಾಥ್ – ಸದಸ್ಯರು | ಮುಖ್ಯಲೆಕ್ಕಾಧಿಕಾರಿ, |
| ಲಲಿತ ತಿಮ್ಮನಂಜಯ್ಯ.ಕೆ.ಎಲ್.ಆರ್ – ಸದಸ್ಯರು | ಮುಖ್ಯ ಆರೋಗ್ಯಾಧಿಕಾರಿ, |
| ನೇತ್ರಾ ನಾರಾಯಣ್ – ಸದಸ್ಯರು | ಕಾರ್ಯಪಾಲಕ ಅಭಿಯಂತರರು (ಸಾರಿಗೆ), |
| ಉಮೇಸಲ್ಮ – ಸದಸ್ಯರು | ಉಪ ನಿಯಂತ್ರಕರು (ಹಣಕಾಸು–ಕೇಂದ್ರ), |
| ಎ. ಕೋದಂಡರೆಡ್ಡಿ – ಸದಸ್ಯರು | ವಿದ್ಯಾಧಿಕಾರಿ, |
| ಕುಸುಮ. ಹೆಚ್ – ಸದಸ್ಯರು | ಮುಖ್ಯ ಆರ್ಥಿಕ ಅಧಿಕಾರಿ, |
| ಕೆ.ವಿ. ರಾಜೇಂದ್ರಕುಮಾರ್ – ಸದಸ್ಯರು | ಸಹಾಯಕ ಕಂದಾಯ ಅಧಿಕಾರಿ (ಪಶ್ಚಿಮ–ಮಾರುಕಟ್ಟೆ), |
| ಅರುಣ ರವಿ – ಸದಸ್ಯರು | ಸಂಬಂಧಪಟ್ಟ ಅಧಿಕಾರಿಗಳು, |
| **ಗೈರು ಹಾಜರಿದ್ದ ಸದಸ್ಯರುಗಳು** | -- |
| ಕೆ. ಪೂರ್ಣಿಮ – ಸದಸ್ಯರು | -- |

***(ಹಿಂದಿನ ಸಭೆಯ ನಡವಳಿಗಳನ್ನು ಓದಿ ದಾಖಲು ಮಾಡಿಕೊಳ್ಳಲಾಯಿತು)***

### *01]. ವಿಷಯದ ಸಂಖ್ಯೆಃ ತೆಆಸ್ಥಾಸ/55/2015–16*

ಆಯುಕ್ತರ ಟಿಪ್ಪಣಿ ದಿನಾಂಕ: 02–12–2015ರಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆರೋಗ್ಯ ಇಲಾಖೆಯಲ್ಲಿ ಕ್ಷೇತ್ರ ಕಾರ್ಯಗಳ ಹಿತದೃಷ್ಟಿಯಿಂದ ಅರ್ಹತೆ ಹೊಂದಿರುವ ಹಿರಿಯ ಆರೋಗ್ಯ ಪರಿವೀಕ್ಷಕರ ವೃಂದದಿಂದ ಮುಂಬಡ್ತಿ ಮೂಲಕ ತುಂಬಲು ವಿಧಾನಸಭಾ ಕ್ಷೇತ್ರವಾರು 27 ಹುದ್ದೆಗಳು ಹಾಗೂ ಲೀವ್ ರಿಸರ್ವ್‌ಗಾಗಿ ಅಧಿಕ 03 ಹುದ್ದೆಗಳು ಸೇರಿದಂತೆ ಒಟ್ಟು 30 ಹೆಲ್ತ್ ಸೂಪರ್ ವೈಸರ್ ಹುದ್ದೆಗಳನ್ನು ಸೃಜಿಸಿ, ಈ ಕೆಳಕಂಡಂತೆ ವೃಂದ ಮತ್ತು ನೇಮಕಾತಿ ನಿಯಮಾವಳಿಯಲ್ಲಿ ಸೇರ್ಪಡಿಸುವ ಸಂಬಂಧ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ತೀರ್ಮಾನಕ್ಕಾಗಿ ಟಿಪ್ಪಣಿಯನ್ನು ಮಂಡಿಸಲಾಗಿರುತ್ತದೆ.

1) Must have passed SSLC Examination with 2 years Sanitary Inspector Training Course.
2) Must have put in a service not less than 10 years in the cadre of Senior Health Inspector.

ಸದರಿ ಟಿಪ್ಪಣಿಯನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯವರು ಒಪ್ಪಿದ್ದು ಸದರಿ ನಿರ್ಣಯವನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯವರು ಒಪ್ಪಿದ್ದು ಸದರಿ ನಿರ್ಣಯವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯು ಒಪ್ಪಿರುತ್ತದೆ.

ಸದರಿ ನಿರ್ಣಯದಂತೆ, ಪಾಲಿಕೆಯ ಆರೋಗ್ಯ ಇಲಾಖೆಯಲ್ಲಿ ಕ್ಷೇತ್ರ ಕಾರ್ಯಗಳ ಹಿತದೃಷ್ಟಿಯಿಂದ ವಿಧಾನಸಭಾ ಕ್ಷೇತ್ರವಾರು ಒಟ್ಟು 30 ಹೆಲ್ತ್ ಸೂಪರ್‌ವೈಸರ್ ಹುದ್ದೆಗಳನ್ನು ಸೃಜಿಸಿ, ಅರ್ಹತೆ ಹೊಂದಿರುವ ಹಿರಿಯ ಆರೋಗ್ಯ ಪರಿವೀಕ್ಷಕರ ವೃಂದದಿಂದ ಮುಂಬಡ್ತಿ ಮೂಲಕ ತುಂಬಲು ನಿರ್ಣಹಿಸಲಾಗಿರುವುದರಿಂದ ಸದರಿ ಹುದ್ದೆಗಳನ್ನು ಸೃಜಿಸಲು ಹಾಗೂ ಪಾಲಿಕೆಯ ವೃಂದ ಮತ್ತು ನೇಮಕಾತಿ ನಿಯಮಾವಳಿಯಲ್ಲಿ

ತಿದ್ದುಪಡಿ ತರಲು ಸರ್ಕಾರಕ್ಕೆ ಪತ್ರದಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿದ್ದು, ಸದರಿ ಪ್ರಸ್ತಾವನೆಯನ್ನು ಸರ್ಕಾರವು ನಗರಾಭಿವೃದ್ಧಿ ಇಲಾಖೆಯ ಪತ್ರ ಸಂಖ್ಯೆ: ನಅಇ 302 ಎಂಎನ್‌ವೈ 2012 ದಿನಾಂಕ: 28-01-2013ರ ಪತ್ರದಲ್ಲಿ ಪರಿಗಣಿಸಲು ಸಾಧ್ಯವಿಲ್ಲವೆಂದು ತಿಳಿಸಿರುತ್ತದೆ.

ಪ್ರಸ್ತುತ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿ/ನೌಕರರ ಸಂಘ (ರಿ) ರವರು ಮನವಿ ಸಲ್ಲಿಸಿ, ಪಾಲಿಕೆಯ ಕರ್ತವ್ಯ ನಿರ್ವಹಣೆ ಜವಾಬ್ದಾರಿಗಳ ಬಗ್ಗೆ ಪಾಲಿಕೆ ಅಗತ್ಯ ಹುದ್ದೆಗಳನ್ನು ಸೃಷ್ಟಿಸಲು ಅವಕಾಶವಿರುವುದರಿಂದ ಪಾಲಿಕೆಯ ಉಪ ವಿಭಾಗವಾರು ಒಂದು ಹೆಲ್ತ್ ಸೂಪರ್‌ವೈಸರ್ ಹುದ್ದೆಗಳನ್ನು ಸೃಜಿಸುವ ಬಗ್ಗೆ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತರಲು ಪುನರ್ ಮನವಿಯನ್ನು ನಗರಾಭಿವೃದ್ಧಿ ಇಲಾಖೆಗೆ ಸಲ್ಲಿಸುವಂತೆ ಕೋರಿರುತ್ತಾರೆ.

ಸದರಿ ಮನವಿಯ ಸಂಬಂಧ ಮುಖ್ಯ ಆರೋಗ್ಯಾಧಿಕಾರಿಗಳ ಅಭಿಪ್ರಾಯ ವರದಿಯನ್ನು ಕೋರಲಾದಂತೆ, ಮುಖ್ಯ ಆರೋಗ್ಯಾಧಿಕಾರಿಗಳು ಆರೋಗ್ಯ ವಿಭಾಗಕ್ಕೆ ಸಂಬಂಧಿಸಿದ ರಾಷ್ಟ್ರೀಯ ಕಾರ್ಯಕ್ರಮಗಳ ಯೋಜನೆಗಳು ಚಾಲ್ತಿಯಲ್ಲಿರುವುದರಿಂದ ಅವುಗಳ ಅನುಷ್ಠಾನದ ಹಿತದೃಷ್ಟಿಯಿಂದ ಪಾಲಿಕೆಯ ಪ್ರತಿಯೊಂದು ವಿಧಾನಸಭಾ ಕ್ಷೇತ್ರವಾರು ಹೆಲ್ತ್ ಸೂಪರ್‌ವೈಸರ್ ಹುದ್ದೆಗಳನ್ನು ಸೃಜಿಸುವುದು ಅವಶ್ಯಕವೆಂದು ಅಭಿಪ್ರಾಯಿಸಿರುತ್ತಾರೆ.
ಹೆಲ್ತ್ ಸೂಪರ್‌ವೈಸರ್ ಹುದ್ದೆಗಳನ್ನು ಸೃಜಿಸಿದ್ದಲ್ಲಿ ಪ್ರತಿಯೊಬ್ಬರಿಗೆ ತಗಲುವ ಮಾಹೆಯಾನ ವೇತನದ ವಿವರಗಳು ಈ ಕೆಳಕಂಡಂತೆ ಇರುತ್ತದೆ.

| **ಕ್ರಮ ಸಂಖ್ಯೆ** | **ವಿವರಗಳು** | **ಮೊತ್ತ (ರೂ ಗಳಲ್ಲಿ)** |
|---|---|---|
| ವೇತನ ಶ್ರೇಣಿ ರೂ.17650-32000 | | |
| 1 | ಮೂಲ ವೇತನ | 17,650-00 |
| 2 | ತುಟ್ಟಿಭತ್ಯೆ | 5,736-00 |
| 3 | ಮನೆ ಬಾಡಿಗೆ ಭತ್ಯೆ | 5,295-00 |
| 4 | ನಗರ ಪರಿಹಾರ ಭತ್ಯೆ | 350-00 |
| 5 | ವೈದ್ಯಕೀಯ ಭತ್ಯ | 100-00 |
| **ಒಟ್ಟು** | | **29,131-00** |

**ಹೆಲ್ತ್ ಸೂಪರ್‌ವೈಸರ್ ಹುದ್ದೆಗಳನ್ನು ಸೃಜಿಸಿದ್ದಲ್ಲಿ ಪ್ರತಿ ಒಬ್ಬರಿಗೆ ಮಾಹೆವಾರು ವೇತನ ರೂ.29,131-00 ಗಳಾಗುತ್ತದೆ.**

ಅದರಂತೆ, ಒಟ್ಟು 30-ಮಂದಿಗೆ

- ಪ್ರತಿ ಮಾಹೆಯಾನ - ರೂ. 8,73,930-00 (29,131 x 30) ಗಳಾಗುತ್ತದೆ
- ಪ್ರತಿ ವರ್ಷಕ್ಕೆ - ರೂ. 1,04,87,160-00 (29,131 x 30 x 12) ಗಳಾಗುತ್ತದೆ

ಹೆಲ್ತ್ ಸೂಪರ್ ವೈಸರ್‌ಗಳಿಗೆ ವಹಿಸಬಹುದಾದ ಕರ್ತವ್ಯಗಳ ಬಗ್ಗೆ ಆರೋಗ್ಯಾಧಿಕಾರಿ (ದಕ್ಷಿಣ) ರವರಿಂದ ಮಾಹಿತಿ ಕೋರಲಾಗಿ, ಆರೋಗ್ಯಾಧಿಕಾರಿ (ದಕ್ಷಿಣ) ರವರು ಹೆಲ್ತ್ ಸೂಪರ್‌ವೈಸರ್‌ಗಳಿಗೆ ಈ ಕೆಳಕಂಡ ಕರ್ತವ್ಯಗಳನ್ನು ವಹಿಸಬಹುದಾಗಿರುತ್ತದೆಂದು ತಿಳಿಸಿರುತ್ತಾರೆ.

1. Regulation of Trades and Licensing
2. Mosquito Control Activities
3. Implementation & monitoring of various National Health Programme
4. Maintenance of Vital statistics including Birth and Death registration
5. Bio medical waste regulation
6. Bulk generator's waste regulation and maintenance of sanitation of commercial establishment
7. Enforcement of environmental act by preventing less than 40 micron plastics
8. Any other direction given by the Commissioner and other officer work under medical officer of Health in Rang Level

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹೆಲ್ತ್ ಸೂಪರ್‌ವೈಸರ್ ಹುದ್ದೆಯು ಅವಶ್ಯಕವಾಗಿರುವುದರಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆರೋಗ್ಯ ಇಲಾಖೆಯಲ್ಲಿ ಕ್ಷೇತ್ರ ಕಾರ್ಯಗಳ ಹಿತದೃಷ್ಟಿಯಿಂದ ಅರ್ಹತೆ ಹೊಂದಿರುವ ಹಿರಿಯ ಆರೋಗ್ಯ ಪರಿವೀಕ್ಷಕರ ವೃಂದದಿಂದ ಮುಂಬಡ್ತಿ ಮೂಲಕ ತುಂಬಲು ವಿಧಾನಸಭಾ ಕ್ಷೇತ್ರವಾರು 27 ಹುದ್ದೆಗಳು ಹಾಗೂ ಲೀವ್ ರಿಸರ್ವ್‌ಗಾಗಿ ಅಧಿಕ 03 ಹುದ್ದೆಗಳು ಸೇರಿದಂತೆ ಒಟ್ಟು 30 ಹುದ್ದೆಗಳನ್ನು ಹೆಲ್ತ್ ಸೂಪರ್ ವೈಸರ್ ಹುದ್ದೆಗಳನ್ನು ಸೃಜಿಸಿ ಈ ಕೆಳಕಂಡಂತೆ ವೃಂದ ಮತ್ತು ನೇಮಕಾತಿ ನಿಯಮಾವಳಿಯಲ್ಲಿ ಸೇರ್ಪಡಿಸುವ ಸಂಬಂಧ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ಹಾಗೂ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಕಡತದ ಸಂಖ್ಯೆ: ಬಿ12(4)/ಪಿಆರ್/137/2009-10ರಲ್ಲಿ ಆಯುಕ್ತರು ಮಂಡಿಸಿರುವ ಟಿಪ್ಪಣಿ.

1) Must have passed SSLC Examination with 2 years Sanitary Inspector Training Course
2) Must have put in a service not less than 10 years in the cadre of Senior Health Inspector

**ಸಭೆಯಲ್ಲಿ ಹಾಜರಿದ್ದ ಮುಖ್ಯ ಆರೋಗ್ಯಾಧಿಕಾರಿ ರವರ ವರದಿಯ ಮೇರೆಗೆ ಸದರಿ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗಳಿಗೆ ಘನತ್ಯಾಜ್ಯ ನಿರ್ವಹಣೆ ಕಾರ್ಯದ ಜವಾಬ್ದಾರಿಯನ್ನು ವಹಿಸುವ ಷರತ್ತಿಗೊಳಪಡಿಸಿ, ದಿನಾಂಕ: 02.12.2015ರ ಮಾನ್ಯ ಆಯುಕ್ತರವರ ಟಿಪ್ಪಣಿಯನ್ನು ಒಪ್ಪಿರುವ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿಯ ದಿನಾಂಕ: 01-02-2016ರ ನಿರ್ಣಯ.**

**-ಮುಂದೂಡಿದೆ-**

## ***02]. ವಿಷಯದ ಸಂಖ್ಯೆ: ತೆಆಸ್ಥಾಸ/59/2015-16***

ಆಯುಕ್ತರ ಟಿಪ್ಪಣಿ ದಿನಾಂಕ: 15-02-2016ರಲ್ಲಿ ಪ್ರಸ್ತಾಪಿಸಿರುವಂತೆ, ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಲ್ಲೇಶ್ವರಂನ ಐ.ಪಿ.ಪಿ ಸಭಾಂಗಣದಲ್ಲಿ ಘನತ್ಯಾಜ್ಯ ನಿರ್ವಹಣೆ ವಿಷಯದ ಬಗ್ಗೆ ಜರುಗಿದ ಸಭೆಯಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರು ಮತ್ತು ಕಾರ್ಯಪಾಲಕ ಅಭಿಯಂತರು ರವರು ಪ್ಯಾಕೇಜ್-1 ಟೆಂಡರ್‌ನ ಖಾಸಗಿ ವಾಹನಗಳ ಗುತ್ತಿಗೆದಾರರಾದ ಮೆ॥ ಜಾನಕಿ ಟ್ರಾವೆಲ್ಸ್ ಏಜೆನ್ಸಿಯಿಂದ ಗುತ್ತಿಗೆ ವಾಹನಗಳನ್ನು ಸಮರ್ಪಕವಾಗಿ ನೀಡಲಾಗುತ್ತಿಲ್ಲವೆಂದು ಹಾಗೂ ಇದರಿಂದಾಗಿ ಘನತ್ಯಾಜ್ಯ ನಿರ್ವಹಣೆ ಹಾಗೂ ಕಛೇರಿ ಕೆಲಸಗಳನ್ನು ಸಮರ್ಪಕವಾಗಿ ನಿರ್ವಹಿಸಲು ಸಾಧ್ಯವಾಗುತ್ತಿಲ್ಲವೆಂದು ಮೌಖಿಕವಾಗಿ ಮನವಿ ಸಲ್ಲಿಸಿರುತ್ತಾರೆ. ಈ ಬಗ್ಗೆ ಗುತ್ತಿಗೆ ವಾಹನಗಳನ್ನು ಸಮರ್ಪಕವಾಗಿ ಘನತ್ಯಾಜ್ಯ ನಿರ್ವಹಣೆಗೆ ನಿಯೋಜಿಸಿರುವ ಅಧಿಕಾರಿಗಳಿಗೆ ಬೆಳಿಗ್ಗೆ 6-00 ರಿಂದ ರಾತ್ರಿ 10-00 ಗಂಟೆವರೆಗೆ ಗುತ್ತಿಗೆ ವಾಹನಗಳನ್ನು ನಿಯೋಜಿಸುವ ಅವಶ್ಯಕತೆ ಇರುತ್ತದೆ.

ಪ್ಯಾಕೇಜ್-1 (ಹಳೆಯ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕೇಂದ್ರ, ಪೂರ್ವ, ಪಶ್ಚಿಮ & ದಕ್ಷಿಣ ವಲಯದ ಅರ್ಹ ಅಧಿಕಾರಿಗಳು) & ಪ್ಯಾಕೇಜ್-2 (ಆರ್.ಆರ್.ನಗರ, ದಾಸರಹಳ್ಳಿ, ಬೊಮ್ಮನಹಳ್ಳಿ, ಬ್ಯಾಟರಾಯನಪುರ, ಮಹದೇವಪುರ ಯಲಹಂಕ ವಲಯ & ಕೇಂದ್ರ ಕಛೇರಿಯ ಅರ್ಹ ಅಧಿಕಾರಿಗಳು) ಅಡಿಯಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಅಡಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದ್ದು, ಪ್ಯಾಕೇಜ್-1 ಟೆಂಡರ್‌ನಲ್ಲಿ ದರಗಳನ್ನು 2000 ಕಿ.ಮೀ. ಮಿತಿ ಮತ್ತು 315 ಘಂಟೆಗಳ ಅವಧಿ ಹಾಗೂ ಪ್ಯಾಕೇಜ್-2 ಟೆಂಡರ್‌ನಲ್ಲಿ 2500 ಕಿ.ಮೀ ಮಿತಿ ಮತ್ತು 315 ಘಂಟೆಗಳ ಅವಧಿಗೆ ಮಿತಿಗೊಳಿಸಲಾಗಿರುತ್ತದೆ. ಇದರಲ್ಲಿ, ಗುತ್ತಿಗೆ ವಾಹನಗಳಿಗೆ ಸರ್ವೀಸ್ ಟ್ಯಾಕ್ಸ್, ಹೆಚ್ಚುವರಿ ಕಿ.ಮೀ ದರ ಮತ್ತು ಹೆಚ್ಚುವರಿ ಗಂಟೆಗಳ ವೆಚ್ಚವನ್ನು ಭರಿಸಲು ಟೆಂಡರ್‌ನಲ್ಲಿ ಅನುವು ಮಾಡಿಕೊಂಡಿರುವುದಿಲ್ಲ.

ಮುಂದುವರೆದಂತೆ, ಪ್ರಸ್ತುತ ವಲಯಗಳಲ್ಲಿನ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರು ಮತ್ತು ಕಾರ್ಯಪಾಲಕ ಅಭಿಯಂತರು ಹಾಗೂ ಇತರೆ ಹಿರಿಯ ಅಧಿಕಾರಿಗಳಿಗೆ ಘನತ್ಯಾಜ್ಯ ನಿರ್ವಹಣೆ ಹಾಗೂ ಘನತ್ಯಾಜ್ಯ ನಿರ್ವಹಣೆ ಘಟಕಗಳಿಗೆ ಭೇಟಿ ನೀಡಲು ನಿಯೋಜಿಸಿದ್ದು, ಸದರಿ ಕರ್ತವ್ಯದ ಅವಧಿಯು ಬೆಳಿಗ್ಗೆ 6-00 ಘಂಟೆಯಿಂದ ಪ್ರಾರಂಭಗೊಂಡು ರಾತ್ರಿ 10-00 ಘಂಟೆಯವರೆಗೂ ವಿಸ್ತಾರವಾಗಿದ್ದು ಹೆಚ್ಚಿನ ಕಿ.ಮೀ ಕ್ರಮಿಸಬೇಕಾಗಿರುವುದರಿಂದ ಹೆಚ್ಚುವರಿ ಕಿ.ಮೀ ದರ ಮತ್ತು ಹೆಚ್ಚುವರಿ ಗಂಟೆಗಳ ವೆಚ್ಚವನ್ನು ಭರಿಸುವ ಅವಶ್ಯಕತೆ ಇದ್ದು, ವಿವರಗಳು ಕೆಳಕಂಡಂತೆ ಇರುತ್ತದೆ.

| ಕ್ರಸ | ನಿಗದಿಪಡಿಸಿರುವ ಕಿ.ಮೀ (ಪ್ರತಿ ತಿಂಗಳಿಗೆ 2000 ಕಿ.ಮೀ ಮಿತಿ) | ನಿಗದಿಪಡಿಸಿರುವ ಗಂಟೆಗಳ ಅವಧಿ (ಪ್ರತಿ ತಿಂಗಳಿಗೆ 315 ಘಂಟೆಗಳ ಮಿತಿ) | ಹಾಲಿ ಕಾರ್ಯ ನಿರ್ವಹಿಸುತ್ತಿರುವ ಕಿ.ಮೀ | ಹಾಲಿ ಕಾರ್ಯ ನಿರ್ವಹಿಸುತ್ತಿರುವ ಗಂಟೆಗಳ ಅವಧಿ | ವ್ಯತ್ಯಾಸ |
|---|---|---|---|---|---|
| ಪ್ಯಾಕೇಜ್–1 | | | | | |
| 1 | 80 (ಪ್ರತಿ ದಿನಕ್ಕೆ– ಮಾಸಿಕ 25 ದಿನಗಳ ಲೆಕ್ಕದಲ್ಲಿ) = 2000 ಕಿ.ಮೀ | 12.6 | 100 (ಪ್ರತಿ ದಿನಕ್ಕೆ–ಮಾಸಿಕ 25 ದಿನಗಳ ಲೆಕ್ಕದಲ್ಲಿ) = 2500 ಕಿ.ಮೀ | 16 | 500 ಕಿ.ಮೀ ಮತ್ತು 85 ಗಂಟೆಗಳು (ಪ್ರತಿ ತಿಂಗಳಿಗೆ) |
| ಪ್ಯಾಕೇಜ್–2 | | | | | |
| 2 | 100 (ಪ್ರತಿ ದಿನಕ್ಕೆ– ಮಾಸಿಕ 25 ದಿನಗಳ ಲೆಕ್ಕದಲ್ಲಿ) = 2500 ಕಿ.ಮೀ | 12.6 | 110 (ಪ್ರತಿ ದಿನಕ್ಕೆ– ಮಾಸಿಕ 25 ದಿನಗಳ ಲೆಕ್ಕದಲ್ಲಿ) = 2750 ಕಿ.ಮೀ | 16 | 250 ಕಿ.ಮೀ ಮತ್ತು 85 ಗಂಟೆಗಳು (ಪ್ರತಿ ತಿಂಗಳಿಗೆ) |

ಖಾಸಗಿ ಗುತ್ತಿಗೆ ವಾಹನಗಳನ್ನು ಮಾಸಿಕ ಆಧಾರದ ಮೇಲೆ ಪಡೆಯಲು ಕರ್ನಾಟಕ ಸರ್ಕಾರವು ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 96 ಶವಾನೀ 2012, ಬೆಂಗಳೂರು, ದಿನಾಂಕ: 23–08–2012 ರಂತೆ ಕೆಳಕಂಡಂತೆ ದರಗಳನ್ನು ನಿಗದಿಪಡಿಸಲಾಗಿರುತ್ತದೆ.

| | |
|---|---|
| ಹವಾ ನಿಯಂತ್ರಣ ರಹಿತ (ನಾನ್ ಎ.ಸಿ) ವಾಹನಗಳಿಗೆ | |
| ಅ) ಮಾಸಿಕ 2,500 ಕಿ.ಮೀ ಅಥವಾ 300 ಘಂಟೆಗಳು | ರೂ.25,000/– |
| ಆ) 2,500 ಕಿ.ಮೀ. ನಂತರ ಪ್ರತಿ ಕಿ.ಮೀ.ಗೆ | ರೂ.5.50 |
| ಇ) 300 ಘಂಟೆಗಳ ನಂತರ ಪ್ರತಿ ಘಂಟೆಗೆ | ರೂ.40.00 |
| ಹವಾ ನಿಯಂತ್ರಣ (ಎ.ಸಿ) ವಾಹನಗಳಿಗೆ | |
| ಅ) ಮಾಸಿಕ 2,500 ಕಿ.ಮೀ ಅಥವಾ 300 ಘಂಟೆಗಳು | ರೂ.30,000/– |
| ಆ) 2,500 ಕಿ.ಮೀ. ನಂತರ ಪ್ರತಿ ಕಿ.ಮೀ.ಗೆ | ರೂ.6.50 |
| ಇ) 300 ಘಂಟೆಗಳ ನಂತರ ಪ್ರತಿ ಘಂಟೆಗೆ | ರೂ.55.00 |

ಮೇಲ್ಕಂಡ ಸರ್ಕಾರಿ ಆದೇಶದಲ್ಲಿ ನಮೂದಿಸಿರುವ ಮಾಸಿಕ ಆಧಾರದ ಮೇಲೆ ಪಡೆಯಲಾಗುವ ಖಾಸಗಿ ಗುತ್ತಿಗೆ ವಾಹನಗಳ ಹೆಚ್ಚುವರಿ ಕಿ.ಮೀ ಮತ್ತು ಹೆಚ್ಚುವರಿ ಘಂಟೆಗಳ ಅವಧಿಯ ದರಗಳನ್ನು ಪಾಲಿಕೆ ಅಧಿಕಾರಿಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ವಾಹನಗಳನ್ನು ಒದಗಿಸಲು ಇ–ಪ್ರೊಕ್ಯೂರ್‌ಮೆಂಟ್ ಅಡಿಯಲ್ಲಿನ ಪ್ಯಾಕೇಜ್‌ಗಳ ಟೆಂಡರ್ ದರಗಳಿಗೆ ಅಳವಡಿಸಿಕೊಂಡಲ್ಲಿ ಪಾಲಿಕೆಗೆ ಆರ್ಥಿಕವಾಗಿ ಉಳಿತಾಯವಾಗುವ ಸಂಭವವಿರುತ್ತದೆ ಮತ್ತು ಸದರಿ ದರಗಳನ್ನು ಪ್ಯಾಕೇಜ್–1 ಟೆಂಡರ್ ಜೊತೆಗೆ, ಪ್ಯಾಕೇಜ್–2 ಟೆಂಡರ್‌ದಾರರಿಗೂ ಅಳವಡಿಸಿಕೊಳ್ಳುವ ಅವಶ್ಯಕತೆ ಇರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ವಲಯ ಮಟ್ಟದಲ್ಲಿ ಘನತ್ಯಾಜ್ಯ ನಿರ್ವಹಣೆ ಕಾರ್ಯ ನಿರ್ವಹಿಸುತ್ತಿರುವ ಅರ್ಹ ಅಧಿಕಾರಿಗಳಿಗೆ ಪ್ಯಾಕೇಜ್–1 (ಹಳೆಯ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಪೂರ್ವ, ಪಶ್ಚಿಮ ದಕ್ಷಿಣ ವಲಯ & ಕೇಂದ್ರ ಕಛೇರಿ) & ಪ್ಯಾಕೇಜ್–2 (ಆರ್.ಆರ್.ನಗರ, ದಾಸರಹಳ್ಳಿ, ಬೊಮ್ಮನಹಳ್ಳಿ, ಬ್ಯಾಟರಾಯನಪುರ, ಮಹದೇವಪುರ ಯಲಹಂಕ ವಲಯ & ಕೇಂದ್ರ ಕಛೇರಿ) ಟೆಂಡರ್‌ನಲ್ಲಿ ಮಾಸಿಕ ಆಧಾರದ ಮೇಲೆ ನಿಯೋಜಿಸಿಕೊಳ್ಳಲಾಗಿರುವ ಖಾಸಗಿ ಟಾಟಾ ಇಂಡಿಕಾ (ನಾನ್ ಎ.ಸಿ) ವಾಹನಗಳಿಗೆ ಪ್ಯಾಕೇಜ್–1 ಟೆಂಡರ್‌ನಲ್ಲಿ ದರಗಳನ್ನು 2000 ಕಿ.ಮೀ. ಮಿತಿ ಮತ್ತು 315 ಘಂಟೆಗಳ ಅವಧಿ ಹಾಗೂ ಪ್ಯಾಕೇಜ್–2 ಟೆಂಡರ್‌ನಲ್ಲಿ 2500 ಕಿ.ಮೀ ಮಿತಿ ಮತ್ತು 315 ಘಂಟೆಗಳ ಅವಧಿಯ ನಂತರ ಹೆಚ್ಚುವರಿ

ಕಿ.ಮೀ.ಗೆ ರೂ.5.50 ಹಾಗೂ ಹೆಚ್ಚುವರಿ ಘಂಟೆಗಳ ಅವಧಿಗೆ ದರ ರೂ.40/–ಗಳನ್ನು ಹಾಗೂ ಖಾಸಗಿ ಟಾಟಾ ಇಂಡಿಕಾ (ಎ.ಸಿ) ವಾಹನಗಳಿಗೆ ಹೆಚ್ಚುವರಿ ಕಿ.ಮೀ.ಗೆ ರೂ.6.50 ಹಾಗೂ ಹೆಚ್ಚುವರಿ ಘಂಟೆಗಳ ಅವಧಿಗೆ ದರ ರೂ.55/–ಗಳ ದರದಲ್ಲಿ ರೂ.5000/–ಗಳನ್ನು (ಐದು ಸಾವಿರ ರೂಪಾಯಿಗಳು) ಮಿತಿಯೊಳಗೆ ಒಳಪಟ್ಟು (ಪ್ರತಿ ತಿಂಗಳಿಗೆ) ಹೊರಗುತ್ತಿಗೆ ಆಧಾರದ ಮೇಲೆ ವಾಹನಗಳನ್ನು ಒದಗಿಸಲು ಇ–ಪ್ರೊಕೊರ್‌ಮೆಂಟ್ ಅಡಿಯಲ್ಲಿನ ಪ್ಯಾಕೇಜ್–1 ಮತ್ತು ಪ್ಯಾಕೇಜ್–2 ಟೆಂಡರ್‌ದಾರರಿಗೆ ನೀಡಲು ತೆರಿಗೆ & ಸ್ಥಾಯಿ ಸಮಿತಿಯ ಮುಂದೆ ಆಡಳಿತಾತ್ಮಕ ಅನುಮೋದನೆ ಕೋರಿ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ಆಯುಕ್ತರ ಟಿಪ್ಪಣಿ ದಿನಾಂಕ: 15.02.2016ರಲ್ಲಿ ಪ್ರಸ್ತಾಪಿಸಿರುವ ವಿಷಯದ ಕುರಿತು ದೀರ್ಘವಾಗಿ ಚರ್ಚಿಸಿದ ಸಮಿತಿಯು ಸದರಿ ಪ್ರಸ್ತಾವನೆಯನ್ನು ತಿರಸ್ಕರಿಸಲು ತೀರ್ಮಾನಿಸಿತು.**

***03]. ವಿಷಯದ ಸಂಖ್ಯೆ: ತೆಆಸ್ಥಾಸ/74/2015–16***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 05.03.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ರಾಜಾಜಿನಗರ ವಿಭಾಗ ವ್ಯಾಪ್ತಿಯಲ್ಲಿ ಖಾಸಗಿ ಕಟ್ಟಡಗಳ ಮಾಲೀಕರು ಕರ್ನಾಟಕ ಪೌರ ನಿಗಮಗಳ ಕಾಯ್ದೆ–1976, ಬೆಂಗಳೂರು ಮಹಾನಗರ ಪಾಲಿಕೆ ಕಟ್ಟಡ ಉಪ ವಿಧಿಗಳು–2003 ಹಾಗೂ ಚಾಲ್ತಿಯಲ್ಲಿರುವ ಎಲ್ಲಾ ನೀತಿ ನಿಯಮಾವಳಿಗಳನ್ನು ಉಲ್ಲಂಘಿಸಿ ಕಟ್ಟಡ ನಿರ್ಮಾಣ ಮಾಡಿರುವುದರಿಂದ ನಿಯಮಾನುಸಾರ ಈಗಾಗಲೇ ಕಟ್ಟಡಗಳ ಮಾಲೀಕರಿಗೆ ತಿಳುವಳಿಕೆ ಪತ್ರಗಳನ್ನು ಜಾರಿ ಮಾಡಿ ಅನಧಿಕೃತ ಕಟ್ಟಡದ ಭಾಗಗಳನ್ನು ತೆರವುಗೊಳಿಸಲು ಸಂಬಂದಪಟ್ಟ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಸೂಚಿಸಿರುತ್ತಾರೆ. ಆದರೆ ಕಟ್ಟಡಗಳ ಮಾಲೀಕರು ಸದರಿ ತಿಳಿವಳಿಕೆ ಪತ್ರಗಳಲ್ಲಿ ಸೂಚಿಸಿರುವಂತೆ ಅನಧಿಕೃತ ಕಟ್ಟಗಳ ಭಾಗಗಳನ್ನು ತೆರವುಗೊಳಿಸಲು ವಿಫಲರಾದುದರಿಂದ ಸದರಿ ಕಟ್ಟಡದ ಮಾಲೀಕರ ವಿರುದ್ಧ ನಿಯಮಾನುಸಾರ ಕರ್ನಾಟಕ ಪೌರ ನಿಗಮಗಳ ಕಾಯ್ದೆ–1976 ಪ್ರಕರಣ 462ರಂತೆ ಕಟ್ಟಡ ತೆರವು ಆದೇಶಗಳನ್ನು ಸಕ್ಷಮ ಪ್ರಾಧಿಕಾರದಿಂದ ಪಡೆಯಲಾಗಿರುತ್ತದೆ.

ಈ ರೀತಿ ಕರ್ನಾಟಕ ಪೌರ ನಿಗಮಗಳ ಕಾಯ್ದೆ–1976 ಪ್ರಕರಣ 462ರಂತೆ ಕಟ್ಟಡ ತೆರವು ಆದೇಶಗಳನ್ನು ನೀಡಲಾಗಿರುವ ಪ್ರಕರಣಗಳಲ್ಲಿ ಪಾಲಿಕೆಯಿಂದ ಅನಧಿಕೃತವಾಗಿ ನಿರ್ಮಾಣ ಮಾಡಲಾಗಿರುವ ಕಟ್ಟಡದ ಭಾಗಗಳನ್ನು ತೆರವುಗೊಳಿಸಿ ಪೌರ ನಿಗಮಗಳ ಕಾಯ್ದೆ–1976 ಪ್ರಕರಣ 463ರಂತೆ ಅನಧಿಕೃತವಾಗಿ ಕಟ್ಟಡ ನಿರ್ಮಾಣ ಮಾಡಲಾಗಿರುವ ಕಟ್ಟಡದ ಮಾಲೀಕರಿಂದ ವಸೂಲಿ ಮಾಡಬೇಕಿರುತ್ತದೆ.

ಈಗಾಗಲೇ ಪ್ರಸ್ತಾಪಿತ 9 ಖಾಸಗಿ ಕಟ್ಟಡಗಳಲ್ಲಿ ಕೆಲವು ಕಟ್ಟಡಗಳ ವಿಚಾರವಾಗಿ ಕ್ರಮ ಕೈಗೊಳ್ಳುವಂತೆ ನ್ಯಾಯಾಲಯಗಳು ಆದೇಶಿಸಿದ್ದು ಹಾಗೂ ಕೆಲವು ಕಟ್ಟಡಗಳ ವಿಚಾರವಾಗಿ ಗೌ॥ ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿ ದೂರುಗಳು ದಾಖಲಾಗಿದ್ದು ಈ ಎಲ್ಲಾ ಖಾಸಗಿ ಕಟ್ಟಡಗಳ ವಿಚಾರವಾಗಿ ನಿಯಮಾನುಸಾರ ಕ್ರಮ ಕೈಗೊಳ್ಳಲೇಬೇಕಿರುತ್ತದೆ.

ಅದರಂತೆ ಒಟ್ಟು 9 ಖಾಸಗಿ ಕಟ್ಟಡಗಳ ಅನಧಿಕೃತ ಭಾಗಗಳನ್ನು ತೆರವುಗೊಳಿಸಲು ಒಟ್ಟು ರೂ 23,81,250–00ಗಳ ಒಟ್ಟು 9 ಅಂದಾಜು ಪಟ್ಟಿಗಳನ್ನು ತಯಾರಿಸಿ 2015–16ನೇ ಸಾಲಿನ ಆಯವ್ಯಯ ಪುಸ್ತಕದ ಪುಟ ಸಂಖ್ಯೆ: 94ರ ಲೆಕ್ಕಶೀರ್ಷಿಕೆ: ಪಿ–0055 ಒತ್ತುವರಿ ತೆರವು ವೆಚ್ಚಗಳು ಅಡಿಯಲ್ಲಿ ಭರಿಸಲು ಪ್ರಸ್ತಾಪಿಸಲಾಗಿರುತ್ತದೆ. ಆದರೆ, 2015–16ನೇ ಸಾಲಿನಲ್ಲಿ ಪ್ರಸ್ತಾಪಿತ ಲೆಕ್ಕಶೀರ್ಷಿಕೆಯಡಿ ಕೇವಲ ರೂ 8.48 ಲಕ್ಷಗಳ ಅನುದಾನ ಲಭ್ಯವಿದ್ದು ಬಾಕಿ ರೂ ಉಳಿಕೆ ರೂ 13,33,250–00 ಗಳ ಅನುದಾನವನ್ನು ಹೆಚ್ಚುವರಿಯಾಗಿ ಇತರೆ ಮೂಲಗಳಲ್ಲಿ ಬಳಕೆಯಾಗದಿರುವ / ಇತರೆ ಹೆಚ್ಚುವರಿಯಾಗಿ ಇತರೆ ಮೂಲಗಳಲ್ಲಿ ಬಳಕೆಯಾಗದಿರುವ /

ಇತರೆ ಮೂಲಗಳಿಂದ ಮರು ಹೊಂದಾಣಿಕೆ ಮಾಡು ಬಿಡುಗಡೆ ಮಾಡಲು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ:** **ಪ್ರಸ್ತಾಪಿತ ಟಿಪ್ಪಣಿಯಲ್ಲಿ ತಿಳಿಸಿರುವಂತೆ ವ್ಯತಿರಿಕ್ತ ನಿರ್ಮಾಣದ 9 ಖಾಸಗಿ ಕಟ್ಟಡಗಳ ಪೈಕಿ ವಾರ್ಡ್ ಸಂಖ್ಯೆ: 98 ಕಡತದ ಸಂಖ್ಯೆ: EE/RNR/PR/777/15-16 ರ ಶ್ರೀ ಎಸ್. ದೇವರಾಜುಲು S/O ಲೇಟ್ ಶ್ರೀರಾಮುಲು ಮಾಲಿಕತ್ವದ ಸ್ವತ್ತಿನ ಸಂಖ್ಯೆ: 16 (ಹಳೆಯ ಸಂಖ್ಯೆ: 1352/ಎ), 4ನೇ ಬಿ ಮುಖ್ಯರಸ್ತೆ, ಪ್ರಕಾಶ್‌ನಗರ, ಬೆಂಗಳೂರು–21ರಲ್ಲಿನ ಕಟ್ಟಡ ಮತ್ತು ಕಡತದ ಸಂಖ್ಯೆ: EE/RNR/PR/778/15-16 ರ ಶ್ರೀಮತಿ ಜಯಕಾಂತಿ W/O ದೇವರಾಜುಲು ಮಾಲಿಕತ್ವದ ಸ್ವತ್ತಿನ ಸಂಖ್ಯೆ: 17, 4ನೇ ಬಿ ಮುಖ್ಯರಸ್ತೆ, ಪ್ರಕಾಶ್‌ನಗರ, ಬೆಂಗಳೂರು–21ರಲ್ಲಿನ ಕಟ್ಟಡಗಳ ಯತಾಸ್ಥಿತಿಯನ್ನು (Status Quo) ಕಾಯ್ದುಕೊಳ್ಳಲು ನೀಡಿರುವ ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣ (ಕೆ.ಎ.ಟಿ) ಬೆಂಗಳೂರು ರವರ ಆದೇಶದಂತೆ ಕ್ರಮಕೈಗೊಂಡು, ಉಳಿದಂತೆ ವಿಶೇಷ ಆಯುಕ್ತರು (ಯೋಜನೆ)ರವರ ದಿನಾಂಕ: 05.03.2016ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

## ***04]. ವಿಷಯದ ಸಂಖ್ಯೆ: ತೆಆಸ್ಥಾಸ/75/2015–16***

ಆಯುಕ್ತರ ದಿನಾಂಕ: 23.02.2016 ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವ, 2016–17ನೇ ಸಾಲಿನ ಉದ್ದಿಮೆ ಪರವಾನಿಗೆ ನವೀಕರಣವನ್ನು ದಿನಾಂಕ: 01.02.2016 ರಿಂದ ಪ್ರಾರಂಭಿಸಲಾಗಿದೆ. ಫೆಬ್ರವರಿ ಮಾಹೆಯಲ್ಲಿ ದಂಡವಿಲ್ಲದೆ ಉದ್ದಿಮೆ ಪರವಾನಿಗೆ ನವೀಕರಣ ಮಾಡುತ್ತಿದ್ದು, ಮಾರ್ಚ್ ಮಾಹೆಯಲ್ಲಿ ಶೇ.25% ರಷ್ಟು ಹಾಗೂ ಏಪ್ರಿಲ್ ರಿಂದ ಜೂನ್ ಅಂತ್ಯದವರೆಗೆ ಶೇ.100% ರಷ್ಟು ಪರವಾನಿಗೆ ಶುಲ್ಕದ ದಂಡದೊಂದಿಗೆ ನವೀಕರಣವನ್ನು ಮಾಡಲಾಗುತ್ತಿದೆ. ಹಿಂದಿನ ವರ್ಷಗಳಲ್ಲಿ ಜುಲೈ 1ರಿಂದ ಉದ್ದಿಮೆ ಪರವಾನಿಗೆ ತಂತಾನೆ ರದ್ದು ಆಗಲಿದ್ದು ಉದ್ದಿಮೆಯನ್ನು ಮುಚ್ಚಲು ಕ್ರಮವಹಿಸಲಾಗುತ್ತಿತ್ತು. ಇದರಿಂದಾಗಿ ಉದ್ದಿಮೆದಾರರು ಜುಲೈ 1ರ ನಂತರ ಹೊಸದಾಗಿ ಪರವಾನಿಗೆ ಪಡೆಯುತ್ತಿದ್ದು ಇದರಿಂದಾಗಿ ಪಾಲಿಕೆಗೆ ಆರ್ಥಿಕವಾಗಿ ನಷ್ಟವಾಗುತ್ತಿತ್ತು. ಈ ಬಗ್ಗೆ ಮಾನ್ಯ ವಿಶೇಷ ಆಯುಕ್ತರು ತಮ್ಮ ಟಿಪ್ಪಣಿಯಲ್ಲಿ ಜುಲೈ 1ರ ನಂತರ ಉದ್ದಿಮೆ ಪರವಾನಿಗೆಯನ್ನು ಶೇ.200% ರಷ್ಟು ಪರವಾನಿಗೆ ಶುಲ್ಕದ ದಂಡದೊಂದಿಗೆ ನವೀಕರಿಸಬಹುದಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಕೆ.ಎಂ.ಸಿ. ಕಾಯ್ದೆ ಹಾಗೂ ಬೈಲಾಗಳಲ್ಲಿ ಉದ್ದಿಮೆ ಪರವಾನಿಗೆಯನ್ನು 3 ವರ್ಷಗಳವರೆಗೆ ನವೀಕರಿಸಲು ಅವಕಾಶವಿರುತ್ತದೆ. ಅದರಂತೆ, ಜುಲೈ 1ರಿಂದ 3 ವರ್ಷಗಳ ಅವಧಿ ತನಕ ಶೇ.200% ರಷ್ಟು ಪರವಾನಿಗೆ ಶುಲ್ಕದ ದಂಡದೊಂದಿಗೆ ನವೀಕರಿಸುವ ಸಂಬಂಧ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ತೀರ್ಮಾನಕ್ಕಾಗಿ ಮಂಡಿಸಲಾದ ಟಿಪ್ಪಣಿ.

**–ಮುಂದೂಡಿದೆ–**

## ***05]. ವಿಷಯದ ಸಂಖ್ಯೆ: ತೆಆಸ್ಥಾಸ/76/2015–16***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 08.03.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, 14ನೇ ಹಣಕಾಸು ಆಯೋಗದ ಶಿಫಾರಸ್ಸಿನ ಅನ್ವಯ ನಗರ ಸ್ಥಳೀಯ ಸಂಸ್ಥೆಗಳು ಈ ಕೆಳಗೆ ತಿಳಿಸಿರುವಂತೆ ಮೂಲ ಸೇವೆ ಒದಗಿಸಲು 2015–16 ನೇ ಸಾಲಿನಿಂದ 2019–2020 ನೇ ಸಾಲಿನ ವರೆಗಿನ ಅವಧಿಗೆ ಒಟ್ಟಾರೆ ರೂ. 4685.51 ಕೋಟಿಗಳ ಸಾಮಾನ್ಯ ಮೂಲ ಅನುದಾನ (General Basic Grant)ವನ್ನು ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನವನ್ನು ಹಂಚಿಕೆ ಮಾಡಿ, ವಾರ್ಷಿಕ ಅನುದಾನವನ್ನು ಪ್ರಮಾಣಕ್ಕನುಸಾರವಾಗಿ ಉಪಯೋಗಿಸಲು ಸರ್ಕಾರದ ಸುತ್ತೋಲೆ ಸಂಖ್ಯೆ ನಅಇ 245 ಎಸ್.ಎಫ್.ಸಿ 2015 / ದಿನಾಂಕ 17–7–2015 ರ ಆದೇಶದಲ್ಲಿ ಸೂಚಿಸಲಾಗಿದೆ. ಸರ್ಕಾರದ ಆದೇಶದಲ್ಲಿ 2015–16 ನೇ ಸಾಲಿಗೆ ಒಟ್ಟು ರೂ. 562.08

ಕೋಟಿಗಳ ಅನುದಾನ ಒದಗಿಸಿದ್ದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ರೂ. 173.33 ಕೋಟಿಗಳ ಅನುದಾನ ನಿಗಧಿಪಡಿಸಿದೆ. ಸರ್ಕಾರದಿಂದ ಬಿ.ಬಿ.ಎಂ.ಪಿಗೆ ನಿಗಧಿಪಡಿಸಿರುವ ರೂ. 173.33 ಕೋಟಿಗಳ ಅನುದಾನದಲ್ಲಿ ಸರ್ಕಾರದ ಆದೇಶ ಸಂಖ್ಯೆ ನಅಇ 524 ಎಸ್.ಎಫ್.ಸಿ 2015 / ದಿನಾಂಕ 05-01-2016 ರಲ್ಲಿ ಈ ಕೆಳಕಂಡಂತೆ ವಾರ್ಡ್‌ವಾರು ಕ್ರಿಯಾ ಯೋಜನೆಯ ಕಾಮಗಾರಿಗಳಿಗೆ ಅನುಮೋದನೆ ನೀಡಿದೆ.

| ಕ್ರಮ ಸಂಖ್ಯೆ | ವಿವರ | ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|
| 1 | ಕುಡಿಯುವ ನೀರು ಕಾಮಗಾರಿಗಳು | 2800.00 |
| 2 | ಸಾಮೂಹಿಕ / ಸಾರ್ವಜನಿಕ ಶೌಚಾಲಯ ಮತ್ತು ಸಪ್ವೇಜ್‌ಗಳ ನಿರ್ವಹಣೆ | 1098.05 |
| 3 | ಒಳ ಚರಂಡಿ ವ್ಯವಸ್ಥೆ ಕಾಮಗಾರಿಗಳು | 2600.00 |
| 4 | ಘನತ್ಯಾಜ್ಯ ವಸ್ತುಗಳ ನಿರ್ವಹಣೆ | 3234.95 |
| 5 | ಮಳೆ ನೀರು ಚರಂಡಿ ಕಾಮಗಾರಿಗಳು. | 2100.00 |
| 6 | ಸಮುದಾಯ ಆಸ್ತಿಗಳ ನಿರ್ವಹಣೆ (ಪಾರ್ಕ್ ಒಳಗೊಂಡಂತೆ) | 600.00 |
| 7 | ರಸ್ತೆ ಮತ್ತು ಪಾದಚಾರಿ ಮಾರ್ಗಗಳ ನಿರ್ವಹಣೆ | 2500.00 |
| 8 | ವಿದ್ಯುತ್ ಬೀದಿ ದೀಪಗಳ ಅಳವಡಿಕೆ / ನಿರ್ವಹಣೆ/ವಿದ್ಯುತ್ ಉಳಿತಾಯ ಕ್ರಮಗಳು | 1700.00 |
| 9 | ಸ್ಮಶಾನ/ ಚಿತಾಗಾರ/ ಕಛೇರಿ ನಿರ್ವಹಣೆ | 400.00 |
| | **ಒಟ್ಟು** | **17033.00** |

14ನೇ ಹಣಕಾಸು ಆಯೋಗದ ಸಾಮಾನ್ಯ ಮೂಲ ಅನುದಾನದಡಿ ಹಂಚಿಕೆ ಮಾಡಿರುವ ಒಟ್ಟಾರೆ ಅನುದಾನದ ಕಾಮಗಾರಿಗಳಿಗೆ ಒಂದೇ ಲೆಕ್ಕಶೀರ್ಷಿಕೆ ಅಡಿ ಜಾಬ್‌ಸಂಖ್ಯೆ ನೀಡುವುದು ಸೂಕ್ತವಾಗಿರುತ್ತದೆ. ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಅನುಮೋದನೆ ನೀರಿಕ್ಷಿಸಿ 2015-16 ನೇ ಸಾಲಿನ ಆಯವ್ಯಯದಲ್ಲಿ "14ನೇ ಹಣಕಾಸು ಆಯೋಗದ ಅನುದಾನದ ಕಾಮಗಾರಿಗಳು" ಪಿ3110 ಎಂಬ ಪ್ರತ್ಯೇಕ ಲೆಕ್ಕಶೀರ್ಷಿಕೆ ಸೃಜಿಸಿಕೊಂಡು ಜಾಬ್‌ಸಂಖ್ಯೆ ನೀಡಲು ಮಾನ್ಯ ಆಯುಕ್ತರು ಆದೇಶಿಸಿರುತ್ತಾರೆ. ಪ್ರಸ್ಥುತ ಕುಡಿಯುವ ನೀರು, ಘನತ್ಯಾಜ್ಯ ವಸ್ತುಗಳ ನಿರ್ವಹಣೆ, ಮಳೆ ನೀರು ಚರಂಡಿಗಳು, ಸಮುದಾಯ ಆಸ್ತಿಗಳ ನಿರ್ವಹಣೆ, ರಸ್ತೆ ಮತ್ತು ಪಾದಚಾರಿ ಮಾರ್ಗಗಳ ನಿರ್ವಹಣೆ, ವಿದ್ಯುತ್ ಬೀದಿ ದೀಪಗಳ ನಿರ್ವಹಣೆ ಹಾಗೂ ಸ್ಮಶಾನ ಮತ್ತು ಚಿತಾಗಾರಗಳ ನಿರ್ವಹಣೆಯ ಒಟ್ಟು 205 ಕಾಮಗಾರಿಗಳ ಅನುಮೋದಿತ ಮೊತ್ತ ರೂ. 13235.95 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲಾಗಿರುತ್ತದೆ. ಒಳಚರಂಡಿ ವ್ಯವಸ್ಥೆಯ ಮೊತ್ತ ರೂ.2600.00 ಲಕ್ಷಗಳ ಕಾಮಗಾರಿಗಳನ್ನು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಕೈಗೊಳ್ಳಲಾಗುವುದು. 2015-16 ನೇ ಸಾಲಿಗೆ ಒದಗಿಸಿರುವ ಅನುದಾನದ ಮೊತ್ತ ರೂ. 17333.00 ಲಕ್ಷಗಳ ಅನುದಾನವನ್ನು 2015-16 ನೇ ಸಾಲಿನ ಪರಿಷ್ಕೃತ ಆಯವಯ್ಯದಲ್ಲಿ ಅಳವಡಿಸಿಕೊಳ್ಳುವ ಷರತ್ತಿಗೆ ಒಳಪಡಿಸಿ ಲೆಕ್ಕಶೀರ್ಷಿಕೆ ಪಿ-3110 ಸೃಜಿಸಿಕೊಂಡು ರೂ. 13235.95 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲಾಗಿದ್ದು, ಉಳಿಕೆ ಸಾರ್ವಜನಿಕ ಶೌಚಾಲಯ ಮತ್ತು ಸಪ್ವೇಜ್‌ಗಳ ನಿರ್ವಹಣೆ ಮೊತ್ತ ರೂ. 1098.05 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲು ಘಟನೋತ್ತರ ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 08.03.2016ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

***06]. ವಿಷಯದ ಸಂಖ್ಯೆ: ತೆಆಸ್ಥಾಸ/78/2015-16***

ಆಯುಕ್ತರ ದಿನಾಂಕ: 12-03-2016 ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಪಾಲಿಕೆಯ ಕೆಲಸ ಕಾರ್ಯಗಳ ನಿರ್ವಹಣೆಗೆ ಅಗತ್ಯವಿರುವ 116 ನಿಯಂತ್ರಣ ಕೊಠಡಿ ಸಿಬ್ಬಂದಿಗಳ ಸೇವೆ ಅತ್ಯಗತ್ಯವಾಗಿರುವ ಮೇರಗೆ ದಿನಾಂಕ: 22.06.2015 ರಂದು ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಅನ್ನು ಕರೆಯಲಾಗಿರುತ್ತದೆ.

**ಪಾಲಿಕೆಗೆ ನಿಯಂತ್ರಣ ಕೊಠಡಿ ಸಿಬ್ಬಂದಿಗಳ ಅವಶ್ಯಕತೆ ಟೆಂಡರ್‌ನಲ್ಲಿ ಈ ಕೆಳಕಂಡಂತೆ ಪ್ರಸ್ತಾಪಿಸಲಾಗಿತ್ತು.**

| Sl. No. | Designation | No.of Posts |
|---|---|---|
| 1. | Customer Support Representative | 110 |
| 2. | Shift Supervisor | 03 |
| 3. | Shift Manager | 01 |
| 4. | System Network Engineer | 02 |
| | **Total** | **116** |

ಅದರಂತೆ L1 ಸಂಸ್ಥೆಯಾದ M/S Cyber Futuristics India Pvt ltd ರವರಿಂದ ಬಿಡ್ಡನ್ನು ಸ್ವೀಕರಿಸಿದ್ದು, ಮಾನ್ಯ ವಿಶೇಷ ಆಯುಕ್ತರು (ಹಣಕಾಸು) ರವರ ಅನುಮೋದನೆಯಂತೆ 116 ಸಿಬ್ಬಂದಿಗಳಲ್ಲಿ 50 ಸಿಬ್ಬಂದಿಗಳನ್ನು ಕಡಿತ ಗೊಳಿಸಿ 66 ನಿಯಂತ್ರಣ ಕೊಠಡಿ ಸಿಬ್ಬಂದಿಗಳ ವಿವರ ಮತ್ತು ವೇತನವನ್ನು ಈ ಕೆಳಕಂಡಂತೆ ನಿಗದಿಪಡಿಸಲಾಗಿರುತ್ತದೆ.

***66 ಸಿಬ್ಬಂದಿಗಳ ವಿವರ ಈ ಕೆಳಕಂಡಂತಿರುತ್ತದೆ.***

| Sl. No. | Designation | No.of Posts |
|---|---|---|
| 1. | Customer Support Representative | 60 |
| 2. | Shift Supervisor | 03 |
| 3. | Shift Manager | 01 |
| 4. | System Network Engineer | 02 |
| | **Total** | **66** |

***ಪ್ರತಿ ಮಾಹೆಗೆ ತಗಲುವ ವೆಚ್ಚದ ವಿವರ***

| Sl. No. | Designation | Basic | ESI @ 4.75% | PF @ 13.61% | Wages for weekly holiday @ 4days / month | Wages for national & Festival Holidays 10 Days per year | Leave with wages @ 1.5 days per month (calculated at 1 day for 20 days of actual work) | Total Salary (A+B+C+D+E+F) | Service charges | No.of Posts | Total cost per month G+H | Grand Total I*J |
|---|---|---|---|---|---|---|---|---|---|---|---|---|
| | | A | B | C | D | E | F | G | H | I | J | K |
| 1. | Customer Support Representative | 9110 | 433 | 1240 | 1438 | 3594 | 539 | 16354 | 7557 | 60 | 23911 | 14,34,660 |
| 2. | Shift Supervisor | 11440 | 542 | 1552 | 1799 | 4498 | 675 | 20466 | 5800 | 03 | 26266 | 78,798 |
| 3. | Shift Manager | 14230 | 676 | 1937 | 2246 | 5614 | 842 | 25545 | 3600 | 01 | 29145 | 29,145 |
| 4. | System Network Engineer | 17790 | 845 | 2421 | 2807 | 7019 | 1053 | 31935 | 3600 | 02 | 35535 | 71,070 |
| | | | | | | | | **Total** | | | | **16,13,673** |
| **SIXTEEN LAKHS THIRTEEN THOUSANDS SIX HUNDRED SEVENTY THREE ONLY** | | | | | | | | | | | | |

**A one time cost of implementation:**

| Sr. | Item | Unit | Qty | Total Amount in INR (inclusive of all the taxes and other charges) |
|---|---|---|---|---|
| 1. | Media Gateway | No. | 1 | 59,000 |
| 2. | ACD Server Installation | No. | 2 | 1,38,000 |
| 3. | Digital Voice Logger Setup and installation | No. | 1 | 1,47,000 |
| 4. | Application Server Installation | No. | 2 | 36,323 |
| 5. | Database Server Setup | No. | 2 | 19,523 |
| 6. | Backup Server installation with Hot swap redundancy | No. | 1 | 23,500 |
| 7. | Agent application license | No. | 40 | Inclusive |
| 8. | Supervisor console with agent monitoring | No. | 5 | Inclusive |
| 9. | headsets for call centre executives Phones (reputed Brands like CISCO / polycom…) with earphones and MIC with good ambient noise cancellation facility | No. | 40 | 46,000 |

| | | | | |
|---|---|---|---|---|
| 10. | IP Phones (reputed Brands like CISCO/polycom…) | No. | 40 | 3,40,000 |
| 11. | ontegration of Video Wall with CRM and Call Centre Management System | No. | 1 | 40,000 |
| 12. | Domain Server with single sigh on setup and configuration with load balance | No. | 1 | 1,50,000 |
| 13. | Any other Services/components required | No. | | |
| | **Total** | | | **9,99,346** |

M/S Cyber Futuristics India Pvt ltd ಸಂಸ್ಥೆಯವರಿಂದ ನಿಯಂತ್ರಣ ಕೊಠಡಿ ಸಿಬ್ಬಂದಿಗಳ ಸೇವೆಗಳನ್ನು ಒಟ್ಟು 36 ತಿಂಗಳಿಗೆ (03 ವರ್ಷಕ್ಕೆ) ಪಡೆಯಲು ಒಟ್ಟು ವೆಚ್ಚ ರೂ. 5,80,92,228/- (ಐದು ಕೋಟಿ ಎಂಭತ್ತು ಲಕ್ಷದ ತೊಂಭತ್ತೆರಡು ಸಾವಿರದ ಇನ್ನೂರ ಇಪ್ಪತ್ತೆಂಟು ರೂಪಾಯಿಗಳು) ಗಳಾಗಿರುತ್ತವೆ. (ಸದರಿ ವೆಚ್ಚದಲ್ಲಿ ಸೇವಾ ತೆರಿಗೆ ಹೊರತುಪಡಿಸಿ) ಮತ್ತು A one time cost of implementation ವೆಚ್ಚ 9,99,346/- ರೂ.ಗಳು ಸೇರಿ ಒಟ್ಟು 5,90,91,574/- (ಐದು ಕೋಟಿ ತೊಂಭತ್ತು ಲಕ್ಷದ ತೊಂಭತ್ತೊಂದು ಸಾವಿರದ ಐನೂರ ಎಪ್ಪತ್ತನಾಲ್ಕು ರೂಪಾಯಿಗಳು ಮಾತ್ರ) ರೂ.ಗಳಾಗುತ್ತವೆ.

ಮೇಲ್ಕಂಡ ಎಲ್ಲಾ ಅಂಶಗಳನ್ನು ತಮ್ಮ ಅವಗಾಹನೆಗಾಗಿ ತರುತ್ತಾ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೆಲಸ ಕಾರ್ಯಗಳ ಸುಸೂತ್ರ ನಿರ್ವಹಣೆಯ ದೃಷ್ಟಿಯಿಂದ ನಿಯಂತ್ರಣ ಕೊಠಡಿ ಸಿಬ್ಬಂದಿಗಳ ಸೇವೆಯನ್ನು ಪಡೆಯಲು ಕ್ರಮ ಜರುಗಿಸಬೇಕಾಗಿರುವುದರಿಂದ ಟೆಂಡರ್ ಅನುಮೋದನೆ ಪಡೆಯಲು ಪಾಲಿಕೆಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಮಂಡಿಸಲಾದ ಪ್ರಸ್ತಾವನೆ.

**ನಿರ್ಣಯ: ಆಯುಕ್ತರ ದಿನಾಂಕ: 12.03.2016ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

***07]. ವಿಷಯದ ಸಂಖ್ಯೆಃ ತೆಆಸ್ಥಾಸ/79/2015-16***

ಆಯುಕ್ತರ ದಿನಾಂಕ: 05-01-2016 ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಶ್ರೀ. ಕೆ. ಜೋಳನ್ ರವರ ಪತ್ನಿ ಶ್ರೀಮತಿ. ರುಕ್ಮಿಣಿ ರವರು ಕ್ರಯಕ್ಕೆ ನೀಡಲು ಕೋರಿರುವ ಮನವಿ ಪತ್ರದಲ್ಲಿ ವಾರ್ಡ್ ಸಂಖ್ಯೆ:81ರಲ್ಲಿ ವಸತಿ ಗೃಹಗಳನ್ನು ಹಾಲಿ ವಾಸಿಸುತ್ತಿದ್ದವರಿಗೆ ಮಾರಾಟ ಮಾಡುವ ನಿರ್ಣಯ ಕೈಗೊಂಡಿದೆ ಎಂದು ಅದೇ ರೀತಿ ನನಗೂ ಸಹ ಈ ವಸತಿಗೃಹ ಮಾರಾಟ ಮಾಡುವಂತೆ ಅನೇಕ ಮನವಿಗಳನ್ನು ಹಿಂದಿನಿಂದಲೂ ನೀಡುತ್ತಾ ಬಂದಿದ್ದು, ಈ ಹಿಂದೆ ಮಹಾನಗರ ಪಾಲಿಕೆಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಮಹಾನಗರ ಪಾಲಿಕೆಯ ಸಭೆಯ ಮುಂದೆ ವಿಷಯ ಚರ್ಚಿಸಿ ಸರ್ಕಾರಕ್ಕೆ ವರದಿ ಸಲ್ಲಿಸಿದ್ದು, ಸರ್ಕಾರವು ತನ್ನ ಆದೇಶದ ಸಂಖ್ಯೆ: ನಅಇ/279/ಎಂಎನ್‌ಜಿ/03, ದಿನಾಂಕ:25-10-2005ರಂತೆ ದಿನಾಂಕ:27-07-2003ರ ಬಿಬಿಎಂಪಿ ಸಭೆಯ ವಿಷಯದ ಸಂಖ್ಯೆ: 10(284)ರ ನಿರ್ಣಯವನ್ನು ರದ್ದುಪಡಿಸಿರುತ್ತದೆ.

ಪುನಃ ಮಹಾನಗರ ಪಾಲಿಕೆ ಸದಸ್ಯರು/ಸಚಿವರುಗಳು ಕ್ರಯಕ್ಕೆ ನೀಡಲು ಶಿಫಾರಸ್ಸು ಮಾಡಿ ಅನುಕಂಪದ ಆಧಾರದ ಮೇಲೆ ಕ್ರಯಕ್ಕೆ ಮಂಜೂರು ಮಾಡಲು ಕೋರಿರುವ ಸಂಬಂಧ ಪಾಲಿಕೆ ಸಭೆಯ ಮುಂದೆ ಮರು ಮಂಡಿಸಲು ಕೋರಿದ್ದು, ಈ ಮೇರೆಗೆ ಸ್ಥಾಯಿ ಸಮಿತಿಗಳ ಮುಖಾಂತರ ಬಿಬಿಎಂಪಿ ಸಭೆಯ ಮುಂದೆ ಮಂಡಿಸಲಾಗಿದ್ದು, ದಿನಾಂಕ: 07-02-2012ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಮತ್ತು ದಿನಾಂಕ: 22-11-2012ರ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗಳ ನಿರ್ಣಯಗಳನ್ನು ವಿಷಯ ಸಂಖ್ಯೆ: 10(311) 2012-13, ದಿನಾಂಕ:29-12-2012ರ ಬಿಬಿಎಂಪಿ ಸಭೆಯಲ್ಲಿ ಒಪ್ಪಿ ಕ್ರಯಕ್ಕೆ ನೀಡಲು ತೀರ್ಮಾನಿಸಿರುವ ಮೇರೆಗೆ ಪಾಲಿಕೆಯ ನಿರ್ಣಯದ ಬಗ್ಗೆ ಸೂಕ್ತ ಆದೇಶ ಹೊರಡಿಸಲು ಸರ್ಕಾರವನ್ನು ಕೋರಲಾಗಿತ್ತು.

ಈ ಮೇರೆಗೆ ಕೌನ್ಸಿಲ್ ನಿರ್ಣಯದಂತೆ ಶ್ರೀಮತಿ. ರುಕ್ಮಿಣಿ ಯವರಿಗೆ ವಸತಿ ಗೃಹವನ್ನು ಕ್ರಯಕ್ಕೆ ನೀಡುವ ಸಂಬಂಧ ಸರ್ಕಾರವು ಆಕ್ಷೇಪಣೆ ವ್ಯಕ್ತಪಡಿಸಿ ಸ್ಪಷ್ಟ ಅಭಿಪ್ರಾಯವನ್ನು ನೀಡುವಂತೆ ಕೋರಿರುತ್ತದೆ. ಸದರಿ ವಿಷಯದಲ್ಲಿ ಕಾನೂನು ಕೋಶದ ಅಭಿಪ್ರಾಯ ಕೋರಲಾಗಿ, ಕಾನೂನು ಶಾಖೆಯ ಅಭಿಪ್ರಾಯದಂತೆ ಸರ್ಕಾರದ ಆದೇಶ ಸಂಖ್ಯೆ: ನಅಇ 129 ಟಿಎಂಡಿ 2002 ದಿನಾಂಕ:02-06-2003 ರನ್ವಯ ಸಾರ್ವಜನಿಕ ಹರಾಜು ಮೂಲಕವೇ ವಿಲೇವಾರಿ ಮಾಡಬೇಕಾಗಿರುವುದರಿಂದ ವಿಷಯದ ಸಂಖ್ಯೆ:10(311)2012-13, ದಿನಾಂಕ:29-12-2012ರ ಬಿಬಿಎಂಪಿ ಸಭೆಯ ತೀರ್ಮಾನವು ಕೆ.ಎಂ.ಸಿ. ಕಾಯ್ದೆಗೆ ಮತ್ತು ನ್ಯಾಯಾಲಯದ ಆದೇಶದ ವಿರುದ್ಧ

ಇರುವುದರಿಂದ ಕೆ.ಎಂ.ಸಿ. ಕಾಯ್ದೆ ಕಲಂ 72 ರನ್ವಯ ದಿನಾಂಕ:29-12-2012ರ ಪಾಲಿಕೆ ಸಭೆಯ ತೀರ್ಮಾನವನ್ನು ರದ್ದು ಪಡಿಸಲು ದಿನಾಂಕ:07-01-2014ರಂದು ಕೋರಲಾಗಿತ್ತು.

ಈ ಮೇರೆಗೆ ವಿಷಯದ ಸಂಖ್ಯೆ: ತೆಆಸ್ಥಾಸ/109/2012-13, ದಿನಾಂಕ:22-11-2012 ಹಾಗೂ ಪಾಲಿಕೆಯ ವಿಷಯದ ಸಂಖ್ಯೆ : 10 (311) 2012-13, ದಿನಾಂಕ: 29-12-2012ರ ನಿರ್ಣಯಗಳು ಸರ್ಕಾರದ ಆದೇಶ ಸಂಖ್ಯೆ: ನಅಇ 129 ಟಿಎಂಡಿ 2002, ದಿನಾಂಕ:02-06-2003ರನ್ನು ಉಲ್ಲಂಘಿಸಿದಂತಾಗುವುದರಿಂದ ಸದರಿ ನಿರ್ಣಯಗಳನ್ನು ಏಕೆ ರದ್ದುಪಡಿಸಬಾರದು ಎಂಬುದಕ್ಕೆ ಕೆ.ಎಂ.ಸಿ ಕಾಯ್ದೆ 1976ರ ಕಲಂ 98(2) ರನ್ವಯ ನೋಟೀಸ್ ಜಾರಿ ಮಾಡಿ ನಿರ್ಣಯಗಳನ್ನು ರದ್ದುಗೊಳಿಸುವ ಬಗ್ಗೆ ಸಮಜಾಯಿಷಿಗಳೇನಾದರೂ ಇದ್ದಲ್ಲಿ ಸ್ಥಾಯಿ ಸಮಿತಿಗಳು ಹಾಗೂ ಬಿಬಿಎಂಪಿಯಿಂದ ಸಮಜಾಯಿಷಿ ಪಡೆದು ಸರ್ಕಾರಕ್ಕೆ ಸಲ್ಲಿಸುವಂತೆ ನಿರ್ದೇಶಿಸಿದೆ.

ಆದುದರಿಂದ, ದಿನಾಂಕ: 02-06-2015ರಂದು ನೀಡಿರುವ ಕಾರಣ ಕೇಳುವ ನೋಟೀಸ್‌ಗೆ ಸಮಜಾಯಿಷಿ ನೀಡುವ ಬಗ್ಗೆ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬಿಬಿಎಂಪಿ ಸಭೆ ಮುಂದೆ ಮಂಡಿಸಲಾದ ಟಿಪ್ಪಣಿ.

<u>ನಿರ್ಣಯ:</u>

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವಾರ್ಡ್ ಸಂಖ್ಯೆ-93 (ಹಳೆ ವಾರ್ಡ್ ಸಂಖ್ಯೆ-78) ಶಿವಾಜಿನಗರ 4ನೇ ಅಡ್ಡರಸ್ತೆಯಲ್ಲಿರುವ ಪಾಲಿಕೆ ವಸತಿಗೃಹದ ಸಂಖ್ಯೆ: 32/1 ಅನ್ನು ಮಾಜಿ ನಗರ ಸಭಾ ಸದಸ್ಯರಾದ ದಿವಂಗತ ಚೋಳನ್ ರವರ ಪತ್ನಿ ಶ್ರೀಮತಿ. ರುಕ್ಮಿಣಿ ಇವರಿಗೆ ಕ್ರಯಕ್ಕೆ ನೀಡುವ ಕುರಿತಂತೆ ಹಿಂದಿನ ದಿನಾಂಕ:07-02-2012ರ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ವಿಷಯ ಸಂಖ್ಯೆ: ನಯೋಅಸ್ಥಾಸ/209/2011-12ರ ನಿರ್ಣಯವನ್ನು ರದ್ದು ಪಡಿಸುವ ಕುರಿತಂತೆ ಸಮಜಾಯಿಷಿ ನೀಡಲು ಘನ ಸರ್ಕಾರದ ಪತ್ರದಲ್ಲಿ ಸೂಚಿಸಿರುವಂತೆ ಆಯುಕ್ತರ ದಿನಾಂಕ:05-01-2016ರ ಸಂಖ್ಯೆ:ಎ3(2)/ಪಿ.ಆರ್/04/2002-03ರ ಟಿಪ್ಪಣಿ ಕುರಿತಂತೆ ಹಾಜರಿದ್ದ ಸಮಿತಿಯ ಸದಸ್ಯರುಗಳು ಮತ್ತು ಅಧಿಕಾರಿಗಳೊಂದಿಗೆ ಸುದೀರ್ಘವಾಗಿ ಚರ್ಚಿಸಲಾಯಿತು.

ಶ್ರೀ. ಸಂಪತ್‌ರಾಜ್ .ಆರ್, ಪಾಲಿಕೆ ಸದಸ್ಯರು, ವಾರ್ಡ್ ಸಂಖ್ಯೆ-47 ಹಾಗೂ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ಸದಸ್ಯರು ರವರು ದಿನಾಂಕ:25-02-2016ರಂದು ಮನವಿಯೊಂದನ್ನು ಸಲ್ಲಿಸಿ, 2016ನೇ ಸಾಲಿನಲ್ಲಿ ಡಾ। ಬಿ.ಆರ್. ಅಂಬೇಡ್ಕರ್ ರವರ 125 ಜನ್ಮ ದಿನಾಚರಣೆಯನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ವಿಶೇಷವಾಗಿ ಆಚರಿಸುತ್ತಿದ್ದು, ಪರಿಶಿಷ್ಟ ಜಾತಿ/ಪಂಗಡದವರ ಏಳಿಗೆಗಾಗಿ ನಿಸ್ವಾರ್ಥ ಮನೋಭಾವದಿಂದ ಶ್ರಮಿಸಿದ ವ್ಯಕ್ತಿಗಳ ಕುಟುಂಬಗಳಿಗೆ ನೆರವಾಗುವಲ್ಲಿ ಪಾಲಿಕೆಯ ವತಿಯಿಂದಲೂ ಅರ್ಥಪೂರ್ಣವಾಗಿ ಡಾ॥ ಬಿ.ಆರ್. ಅಂಬೇಡ್ಕರ್ ಜಯಂತಿಯನ್ನು ಆಚರಿಸಲು ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಕೋರುತ್ತಾ, ದಲಿತ ನೇತಾರರಾದ ದಿವಂಗತ ಚೋಳನ್‌ರವರು 3 ಬಾರಿ ಪಾಲಿಕೆಯ ಸದಸ್ಯರಾಗಿ ನಿಸ್ವಾರ್ಥ ಸೇವೆ ಸಲ್ಲಿಸಿದ್ದು, ಪರಿಶಿಷ್ಟ ಜಾತಿಗೆ ಸೇರಿದವರಾದ ಸದರಿಯವರು ಡಾ। ಬಿ.ಆರ್. ಅಂಬೇಡ್ಕರ್ ರವರ ತತ್ವ ಮತ್ತು ಆದರ್ಶಗಳನ್ನು ಮೈಗೂಡಿಸಿಕೊಂಡು ದಲಿತರ ಏಳಿಗೆಗಾಗಿ ಪ್ರಾಮಾಣಿಕವಾಗಿ ಮತ್ತು ಅವಿರತವಾಗಿ ಶ್ರಮಿಸಿದ ವ್ಯಕ್ತಿಯಾಗಿದ್ದು, ಪ್ರಸ್ತುತ ರವರ ಕುಟುಂಬಕ್ಕೆ ವಾಸಿಸಲು ಸ್ವಂತ ಮನೆಯಿಲ್ಲದೆ ಕಡುಬಡತನದಿಂದಾಗಿ ತೊಂದರೆ ಅನುಭವಿಸುತ್ತಿರುವ ಕಾರಣ ದಿವಂಗತ ಚೋಳನ್ ರವರ ಪತ್ನಿ ಶ್ರೀಮತಿ. ರುಕ್ಮಿಣಿ ರವರಿಗೆ

ಮೇಲ್ಕಂಡ ಪಾಲಿಕೆಯ ಸ್ವತ್ತನ್ನು ಕ್ರಯಕ್ಕೆ ನೀಡುವ ಪ್ರಸ್ತಾವನೆಯನ್ನು ಮಾನವೀಯತೆ ದೃಷ್ಟಿಯಿಂದ ಪರಿಗಣಿಸುವಂತೆ ಹಾಗೂ ಡಾ। ಬಿ.ಆರ್. ಅಂಬೇಡ್ಕರ್ ರವರ 125 ಜನ್ಮ ದಿನಾಚರಣೆಯ ಅಂಗವಾಗಿ ಈ ಒಂದು ಪ್ರಸ್ತಾವನೆಯನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ಪಾಲಿಕೆಯ ಸಭೆಯ ಮುಂದೆ ಪ್ರಸ್ತಾವನೆಯನ್ನು ಮರು ಮಂಡಿಸಬೇಕೆಂದು ಕೋರಿರುತ್ತಾರೆ.

ಈ ಹಿನ್ನೆಲೆಯಲ್ಲಿ ಸಮಿತಿಯು ಕೆಳಕಂಡಂತೆ ತನ್ನ ಸಮಜಾಯಿಷಿಯನ್ನು ನೀಡಲು ಸರ್ವಾನುಮತದಿಂದ ತೀರ್ಮಾನಿಸಿತು.

**"ದಿವಂಗತ ಚೋಳನ್ ರವರು ಪರಿಶಿಷ್ಟ ಜಾತಿಯವರಾಗಿದ್ದು, ಪಾಲಿಕೆಯ ಮಾಜಿ ಸದಸ್ಯರಾಗಿ ದಲಿತರ ಏಳಿಗೆಗಾಗಿ ಅವಿರತ ಶ್ರಮಿಸಿದವರಾಗಿರುವುದರಿಂದ ಹಾಗೂ ತತ್ಸಂಬಂಧ ಶ್ರೀ. ಸಂಪತ್‌ರಾಜು, ಪಾಲಿಕೆ ಸದಸ್ಯರು, ವಾರ್ಡ್ ಸಂಖ್ಯೆ-47 ಹಾಗೂ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ಸದಸ್ಯರು ರವರು ದಿನಾಂಕ:25-02-**

**2016ರಂದು ಸಮಿತಿಗೆ ನೀಡಿರುವ ಪತ್ರವನ್ನು ಆಧರಿಸಿ, ಈಗಾಗಲೆ ಪಾಲಿಕೆ ಕೌನ್ಸಿಲ್ ಸಭೆಯಲ್ಲಿ ಮತ್ತು ಸಂಬಂಧಪಟ್ಟ ಸ್ಥಾಯಿ ಸಮಿತಿಗಳು ಪಾಲಿಕೆ ಸ್ವತ್ತನ್ನು ಕ್ರಯಕ್ಕೆ ನೀಡುವ ಕುರಿತಂತೆ ತೀರ್ಮಾನಿಸಿರುವುದರಿಂದ ಸದರಿ ತೀರ್ಮಾನವು ಸಮಂಜಸವಾಗಿರುತ್ತದೆಂದು ಸಮಿತಿಯು ಅಭಿಪ್ರಾಯಿಸುತ್ತಾ, ಡಾ। ಬಿ.ಆರ್. ಅಂಬೇಡ್ಕರ್ ರವರ 125ನೇ ಜನ್ಮ ದಿನಾಚರಣೆಯ ಅಂಗವಾಗಿ ಸದರಿ ದಲಿತ ನಾಯಕನ ಕುಟುಂಬಕ್ಕೆ ನೆರವಾಗುವ ನಿಟ್ಟಿನಲ್ಲಿ ಮಾನವೀಯತೆ ದೃಷ್ಟಿಯಿಂದ ಈ ಒಂದು ಪ್ರಸ್ತಾವನೆಯನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ದಿವಂಗತ ಚೋಳನ್ ರವರ ಪತ್ನಿಯಾದ ಶ್ರೀಮತಿ. ರುಕ್ಮಿಣಿ ರವರಿಗೆ ಪಾಲಿಕೆಯ ಸದರಿ ಸ್ವತ್ತನ್ನು ಕ್ರಯಕ್ಕೆ ನೀಡಲು ತೀರ್ಮಾನಿಸಿ, ಘನ ಸರ್ಕಾರಕ್ಕೆ ಪ್ರಸ್ತಾವನೆಯನ್ನು ರದ್ದು ಪಡಿಸಬಾರದೆಂದು ಕೋರಲು ಆಯುಕ್ತರು ಕ್ರಮ ಕೈಗೊಳ್ಳಬೇಕೆಂದು ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 01.03.2016ರ ಸಭೆಯ ನಿರ್ಣಯ.'**

**ನಿರ್ಣಯ: ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 01.03.2016ರ ಟಿಪ್ಪಣಿಯನ್ನು ಒಪ್ಪುತ್ತಾ, ಸದರಿ ವಿಷಯವನ್ನು ಮಾನವೀಯತೆಯ ದೃಷ್ಟಿಯಿಂದ ಪರಿಗಣಿಸಲು ಆಯುಕ್ತರು ಘನ ಸರ್ಕಾರವನ್ನು ಕೋರಲು ಸಮಿತಿಯು ತೀರ್ಮಾನಿಸಿತು.**

***08]. ವಿಷಯದ ಸಂಖ್ಯೆ: ತೆಆಸ್ಥಾಸ/86/2016-17***

ಆಯುಕ್ತರ ದಿನಾಂಕ: 26.03.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಪಾಲಿಕೆಯ ಮಾರುಕಟ್ಟೆ ವಿಭಾಗದ ಪಶ್ಚಿಮ ವಲಯ ವ್ಯಾಪ್ತಿಯಲ್ಲಿರುವ ರಾಜಾಜಿನಗರ ವಾಣಿಜ್ಯ ಸಂಕೀರ್ಣ ಮಳಿಗೆ ಸಂಖ್ಯೆ:54 ರಿಂದ 106 ರವರೆಗಿನ ಒಟ್ಟು 6974 ಚ.ಅ ವಿಸ್ತೀರ್ಣವುಳ್ಳ 53 ಮಳಿಗೆಗಳನ್ನು ಮೆ:ಜಿಂದಾಲ್ ಚಾರಿಟೇಬಲ್ ಆಸ್ಪತ್ರೆ ಉಪಯೋಗಕ್ಕಾಗಿ ಪರವಾನಗಿ ಶುಲ್ಕದ ಆಧಾರದ ಮೇಲೆ ಹಂಚಿಕೆ ಮಾಡಲಾಗಿದ್ದು, ಈ ಸಂಬಂಧ ದಿನಾಂಕ:01-05-1987 ರಿಂದ 31-03-2016ರವರೆಗಿನ ಪಾಲಿಕೆ ನಿಗದಿಪಡಿಸಿರುವ ಪರವಾನಗಿ ಶುಲ್ಕ/ಗುತ್ತಿಗೆ ಮೊತ್ತ ಹಾಗೂ ಸದರಿ ಸಂಸ್ಥೆಯವರು ಪಾಲಿಕೆಗೆ ಪಾವತಿಸಿರುವ ಮೊತ್ತವನ್ನು ಕಳೆದು ಬಾಕಿ ಇರುವ ಮೊತ್ತದ (ಪರವಾನಗಿ ಶುಲ್ಕ/ಗುತ್ತಿಗೆ ಮೊತ್ತ+ಸೇವಾ ಶುಲ್ಕ+ಕೇಂದ್ರ ಸೇವಾ ಶುಲ್ಕ+ಬಡ್ಡಿ) ಲೆಕ್ಕಚಾರ ಮಾಡಿ ವಿವರಗಳು ಈ ಕೆಳಕಂಡಂತಿವೆ:-

| ಕ್ರ.ಸಂ | ಅವಧಿ | ವಾರ್ಷಿಕ ಬೇಡಿಕೆ | ವಾರ್ಷಿಕ ವಸೂಲಾತಿ | ವಾರ್ಷಿಕ ಬಾಕಿ | ಷರಾ |
|---|---|---|---|---|---|
| | | | | | |
| 01 | 01-05-87 ರಿಂದ 31-03-88 | 165000 | 165000 | ಪಾವತಿಸಲಾಗಿದೆ | ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ದಿನಾಂಕ: 09-02-1987ರ ನಡವಳಿಕೆಗಳು ವಿಷಯದ ಸಂಖ್ಯೆ: 4(389)ರಲ್ಲಿ ಮಳಿಗೆ 54 ರಿಂದ 106 ರವರೆಗೆ ಮೆ.ಎಸ್.ಜಿ.ಜಿಂದಾಲ್ ಚಾರಿಟಬಲ್ ಆಸ್ಪತ್ರೆರವರಿಗೆ ಚದರಡಿ ಒಂದಕ್ಕೆ ರೂ.2.00 ರಂತೆ ತಿಂಗಳಿಗೆ ರೂ.15000/-ಗಳಿಗೆ ಮಂಜೂರು ಮಾಡಲಾಗಿರುತ್ತದೆ. ದಿ: 05.08.1988ರ ನಡವಳಿಗಳ ವಿಷಯದ ಸಂಖ್ಯೆ (222) 15 ವರ್ಷಗಳ ಅವಧಿಗೆ ಗುತ್ತಿಗೆ ನೀಡಲಾಗಿರುತ್ತದೆ. ದಿ: 20.07.1988 ರ ನಿರ್ಣಯದಲ್ಲಿ 3 ವರ್ಷಕ್ಕೊಮ್ಮೆ ಶೇಕಡ 10 ರಷ್ಟು ಬಾಡಿಗೆಯನ್ನು ಹೆಚ್ಚಿಸಲು ತೀರ್ಮಾನಿಸಲಾಗಿರುತ್ತದೆ. |
| 02 | 01-04-88 ರಿಂದ 31-03-89 | 180000 | 180000 | ಪಾವತಿಸಲಾಗಿದೆ | |
| 03 | 01-04-89 ರಿಂದ 31-03-90 | 180000 | 180000 | ಪಾವತಿಸಲಾಗಿದೆ | |

| ಮಾಸಿಕ ಬಾಡಿಗೆಯನ್ನು ಶೇಕಡ 10 ರಷ್ಟು ಹೆಚ್ಚಿಸಲಾಗಿದೆ | | | | | |
|---|---|---|---|---|---|
| ಕ್ರ.ಸಂ | ಅವಧಿ | ವಾರ್ಷಿಕ ಬೇಡಿಕೆ | ವಾರ್ಷಿಕ ವಸೂಲಾತಿ | ವಾರ್ಷಿಕ ಬಾಕಿ | ಷರಾ |
| 01 | 01-04-90 ರಿಂದ 31-03-91 | 198000 | 198000 | ಪಾವತಿಸಲಾಗಿದೆ | ದಿನಾಂಕ: 01-04-1990 ರಿಂದ ಶೇಕಡ 10 ರಷ್ಟು ಹೆಚ್ಚುವರಿ ಮಾಸಿಕ ಬಾಡಿಗೆ ನಿಗದಿ (ರೂ.15,000 +1,500=16,500) **ಒಟ್ಟು ಮೊತ್ತ ರೂ.16,500X12=1,98,000/-** |
| 02 | 01-04-91 ರಿಂದ 31-03-92 | 198000 | 136115 | 61885 | |
| 03 | 01-04-92 ರಿಂದ 31-03-93 | 259885 | 198000 | 61885 | |

| ಮಾಸಿಕ ಬಾಡಿಗೆಯನ್ನು ಶೇಕಡ 10 ರಷ್ಟು ಹೆಚ್ಚಿಸಲಾಗಿದೆ | | | | | |
|---|---|---|---|---|---|
| ಕ್ರ. ಸಂ | ಅವಧಿ | ವಾರ್ಷಿಕ ಬೇಡಿಕೆ | ವಾರ್ಷಿಕ ವಸೂಲಾತಿ | ವಾರ್ಷಿಕ ಬಾಕಿ | ಷರಾ |
| 01 | 01-04-93 ರಿಂದ 31-03-94 | 279685 | 217800 | 61885 | |
| 02 | 01-04-94 ರಿಂದ 31-03-95 | 279685 | 188760 | 90925 | ದಿನಾಂಕ: 01-04-1993 ರಿಂದ ಶೇಕಡ 10ರಷ್ಟು ಹೆಚ್ಚುವರಿ ಮಾಸಿಕ ಬಾಡಿಗೆ ನಿಗದಿ (ರೂ.16,500+1,650=18,150)<br>**ಒಟ್ಟು ಮೊತ್ತ ರೂ.18150X12=2,17,800/-** |
| 03 | 01-04-95 ರಿಂದ 31-03-96 | 308725 | 217800 | 90925 | |

| ಮಾಸಿಕ ಬಾಡಿಗೆಯನ್ನು ಶೇಕಡ 10 ರಷ್ಟು ಹೆಚ್ಚಿಸಲಾಗಿದೆ (01-04-1997 ರಿಂದ ಶೇಕಡ 20ರಷ್ಟು ಕೇಂದ್ರ ಸೇವಾ ಶುಲ್ಕ ಜಾರಿ) | | | | | |
|---|---|---|---|---|---|
| ಕ್ರ. ಸಂ | ಅವಧಿ | ವಾರ್ಷಿಕ ಬೇಡಿಕೆ | ವಾರ್ಷಿಕ ವಸೂಲಾತಿ | ವಾರ್ಷಿಕ ಬಾಕಿ | ಷರಾ |
| 01 | 01-04-96 ರಿಂದ 31-03-97 | 330505 | 239580 | 90925 | ದಿನಾಂಕ:01-04-1996 ರಿಂದ ಶೇಕಡ 10ರಷ್ಟು ಹೆಚ್ಚುವರಿ ಮಾಸಿಕ ಬಾಡಿಗೆ ನಿಗದಿ (ರೂ.18,150+1,815=19,965)<br>ದಿನಾಂಕ: 01-04-1997 ರಲ್ಲಿ ಸೇವಾ ಶುಲ್ಕ ಶೇಕಡ 20 ರಂತೆ ಜಾರಿ<br>**ಒಟ್ಟು ಮೊತ್ತ ರೂ.19,965+3,993=23,958X12=2,87,496/-** |
| **ಸೇವಾ ಶುಲ್ಕ ಶೇಕಡ 20 ರಷ್ಟು ಬಾಡಿಗೆ ಸೇರಿಸಲಾಗಿದೆ** | | | | | |
| 02 | 01-04-97 ರಿಂದ 31-03-98 | 378421 | 239580 | 138841 | |
| 03 | 01-04-98 ರಿಂದ 31-03-99 | 426337 | 239580 | 186737 | |

| ಮಾಸಿಕ ಬಾಡಿಗೆಯನ್ನು ಶೇಕಡ 10 ರಷ್ಟು + ಕೇಂದ್ರ ಸೇವಾ ಶುಲ್ಕ ಶೇಕಡ 20 ರಷ್ಟು ಬಾಡಿಗೆಗೆ ಸೇರಿಸಲಾಗಿದೆ | | | | | |
|---|---|---|---|---|---|
| ಕ್ರ. ಸಂ | ಅವಧಿ | ವಾರ್ಷಿಕ ಬೇಡಿಕೆ | ವಾರ್ಷಿಕ ವಸೂಲಾತಿ | ವಾರ್ಷಿಕ ಬಾಕಿ | ಷರಾ |
| 01 | 01-04-99 ರಿಂದ 31-03-2000 | 503005 | 412080 | 90925 | |
| 02 | 01-04-2000 ರಿಂದ 31-03-2001 | 407173 | 316248 | 90925 | ಮಾಸಿಕಶುಲ್ಕ ರೂ.19,965=00 ಶೇಕಡ 10% ರೂ.1997 =21962ಕ್ಕೆ 21,962ಕ್ಕೆ ಶೇಕಡ 20% ಸೇವಾಶುಲ್ಕ 4,392=00 26354/- ಮಾಸಿಕ ಶುಲ್ಕ ರೂ.21,962=00 ಸೇವಾ ಶುಲ್ಕ ರೂ.4,392=00<br>**ಒಟ್ಟು ರೂ.26,354X12=3,16,248=00** |
| 03 | 01-04-2001 ರಿಂದ 31-03-2002 | 407173 | 131770 | 275403 | |

| ಮಾಸಿಕ ಬಾಡಿಗೆಯನ್ನು ಶೇಕಡ 10 ರಷ್ಟು + ಕೇಂದ್ರ ಸೇವಾ ಶುಲ್ಕ ಶೇಕಡ 20 ರಷ್ಟು ಬಾಡಿಗೆಗೆ ಸೇರಿಸಲಾಗಿದೆ | | | | | |
|---|---|---|---|---|---|
| ಕ್ರ. ಸಂ | ಅವಧಿ | ವಾರ್ಷಿಕ ಬೇಡಿಕೆ | ವಾರ್ಷಿಕ ವಸೂಲಾತಿ | ವಾರ್ಷಿಕ ಬಾಕಿ | ಷರಾ |
| 01 | 01-04-2002 ರಿಂದ 31-03-2003 | 727323 | 237186 | 490137 | ದಿ:23-05-2002ರಂದು ನಡೆದ ಸಭೆಯಲ್ಲಿ ತೀರ್ಮಾನವಾದ ವಿಷಯದ ಸಂಖ್ಯೆ:20(19) ರಲ್ಲಿ ದಿ:01-04-2002 ರಿಂದ 5 ವರ್ಷಗಳ ಅವಧಿಯವರೆಗೆ ಗುತ್ತಿಗೆಯನ್ನು ಪ್ರತಿ ತಿಂಗಳಿಗೆ ರೂ.31,383=00 ಪರವಾನಗಿ ಶುಲ್ಕ 20% + ಸೇವಾ ಶುಲ್ಕ<br>ಮಾಸಿಕ ಶುಲ್ಕ ರೂ.31,383=00<br>ಸೇವಾ ಶುಲ್ಕ ರೂ.6,277=00 |
| 02 | 01-04-2003 ರಿಂದ 31-03-2004 | 942057 | 760764 | 181293 | |
| 03 | 01-04-2004 | 633213 | 451920 | 181293 | |

| | | | | | |
|---|---|---|---|---|---|
| | ರಿಂದ 31-03-2005 | | | | **ಒಟ್ಟು ರೂ.37,660X12=4,51,921=00** **ತೀರ್ಮಾನಿಸಿರುವ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ದಿನಾಂಕ: 08-04-2002ರ ನಿರ್ಣಯ** |
| 04 | 01-04-2005 ರಿಂದ 31-03-2006 | 633213 | 451920 | 181293 | |
| 05 | 01-04-2006 ರಿಂದ 31-03-2007 | 633213 | 414260 | 218953 | |
| **ಸೇವಾ ಶುಲ್ಕ ಶೇಕಡ 20 ರಷ್ಟು ಬಾಡಿಗೆ ಸೇರಿಸಲಾಗಿದೆ** | | | | | |
| **ಕ್ರ. ಸಂ** | **ಅವಧಿ** | **ವಾರ್ಷಿಕ ಬೇಡಿಕೆ** | **ವಾರ್ಷಿಕ ವಸೂಲಾತಿ** | **ವಾರ್ಷಿಕ ಬಾಕಿ** | **ಷರಾ** |
| 01 | 01-04-2007 ರಿಂದ 01-05-2007 | 403569 | 9240 | 394329 | ದಿ:26-10-2006 ರಂದು ನಡೆದತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಸಭೆಯ ನಡವಳಿಕೆಗಳು ವಿಷಯದ ಸಂಖ್ಯೆ:ತೆ ಮತ್ತು ಆ/89/06-2007ರ ಮೇರೆಗೆ ದಿನಾಂಕ:01-04-2007 ರಿಂದ 3 ವರ್ಷದ ಅವಧಿಗೆ ಚ.ಅ ರೂ.10.00 ರಂತೆ ರೂ.6,974.00 ಚ.ಅಡಿಗೆ ಒಟ್ಟು ಮಾಸಿಕ ಬಾಡಿಗೆ ರೂ.69,740+20% ಸೇವಾ ಶುಲ್ಕ ರೂ.13,948.00=83688.00<br>ಮಾಸಿಕ ಶುಲ್ಕ ರೂ.69,740.00<br>ಸೇವಾಶುಲ್ಕ ರೂ.13,948.00<br>ದಿ:01-06-2007 ರಿಂದ ಕೇಂದ್ರ ಸೇವಾ ಶುಲ್ಕ ರೂ.8,620.00<br>**ಒಟ್ಟು ರೂ. 92,308.00 X 12=11,07,696/-** |
| **ಕೇಂದ್ರ ಸೇವಾ ಶುಲ್ಕ 12.36 ರಷ್ಟು ಪರವಾನಗಿ ಶುಲ್ಕದಜೊತೆಗೆ ಹೆಚ್ಚಿಸಲಾಗಿದೆ** | | | | | |
| | 01-06-2007 ರಿಂದ 31-03-2008 | 1231209 | 350000 | 881209 | |
| 2 | 01-04-2008 ರಿಂದ 31-03-2009 | 1885465 | 300000 | 1585465 | |
| 3 | 01-04-2009 ರಿಂದ 31-03-2010 | 2589721 | 300000 | 2289721 | |
| 01-06-2007 ರಿಂದ 31-03 2010 8620 X 34ಸಿ.ಎಸ್.ಟಿ | | | | 293080 | |
| | | | | ಮೊತ್ತ 2582801 | |
| | | | | ಕಡಿತ 215000 | |
| | | | | **ಒಟ್ಟು ಮೊತ್ತ ರೂ. 2367801** | |

ದಿನಾಂಕ: 15.03.2014ರಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆಯವರಿಗೆ ರೂ.23,67,801/-ಗಳು ಬಾಕಿ ಇರುವ ಮೊತ್ತವನ್ನು ಹಾಗೂ ಪಾವತಿಸಬೇಕಾಗಿರುವ ಹಣವನ್ನು ಮನ್ನಾ ಮಾಡಲು ಕಾನೂನಿನಲ್ಲಿ ಅಥವಾ ನಿಯಮಾವಳಿಯಲ್ಲಿ ಅವಕಾಶವಿರುವುದಿಲ್ಲ ಹಾಗೂ ಇದರಿಂದ ನಗರ ಪಾಲಿಕೆಗೆ ಭರಿಸಲಾಗದ ನಷ್ಟ ಉಂಟಾಗುತ್ತದೆಂಬುದಾಗಿ ಪಾಲಿಕೆಯ ಕಾನೂನು ಕೋಶದ ಮುಖ್ಯಸ್ಥರ ಅಭಿಪ್ರಾಯದ ಮೇರೆಗೆ ಪತ್ರ ಬರೆಯಲಾಗಿತ್ತು.

ಸರ್ಕಾರದವರು ದಿ: 29-05-2013 ರಂದು ರೂ. 23,67,801/-ಗಳ ಬಾಕಿ ಮೊತ್ತವನ್ನು ಪಾವತಿಸಿಕೊಳ್ಳುವ ಬಗ್ಗೆ ಪಾಲಿಕೆಯು ಯಾವ ಕ್ರಮ ತೆಗೆದುಕೊಂಡಿದೆ? ಎಂಬ ಬಗ್ಗೆ ಮಾಹಿತಿ ನೀಡುವಂತೆ ಸೂಚಿಸಿರುವ ಮೇರೆಗೆ ಸದರಿ ಸಂಸ್ಥೆಯವರಿಗೆ ಎರಡು ಬಾರಿ ಹಿಂಬರಹ ಪತ್ರವನ್ನು ನೀಡಲಾಗಿರುತ್ತದೆ. ಆದರೆ ಸದರಿ ಸಂಸ್ಥೆಯವರು ಈ ತಹಲ್‌ವರೆವಿಗೂ ಬಾಕಿ ಮೊತ್ತವನ್ನು ಪಾವತಿಸಿರುವುದಿಲ್ಲ.

| ಸೇವಾ ಶುಲ್ಕ ಶೇಕಡ 20 ರಷ್ಟು ಬಾಡಿಗೆ ಸೇರಿಸಲಾಗಿದೆ | | | | | |
|---|---|---|---|---|---|
| ಕ್ರ. ಸಂ | ಅವಧಿ | ವಾರ್ಷಿಕ ಬೇಡಿಕೆ | ವಾರ್ಷಿಕ ವಸೂಲಾತಿ | ವಾರ್ಷಿಕ ಬಾಕಿ | ಷರಾ |
| 01 | 01-04-2010 ರಿಂದ 31-03-2011 | 3372057 | 360000 | 3012057 | |
| 2 | 01-04-2011 ರಿಂದ 31-03-2012 | 4016313 | 360000 | 3656313 | |
| 3 | 01-04-2012 ರಿಂದ 31-03-2013 | 4660569 | 360000 | 4300569 | |
| 4 | 01-04-2013 ರಿಂದ 31-03-2014 | 5304825 | 360000 | 4944825 | |
| 5 | 01-04-2014 ರಿಂದ 31-03-2015 | 6451209 | 360000 | 6091209 | ಸರ್ಕಾರದ ಸುತ್ತೋಲೆ ಸಂಖ್ಯೆ:ಯುಡಿಡಿ 221 ಜಿಇಎಲ್ 2009 ದಿನಾಂಕ:26-10-2009ನ್ನು ಅಳವಡಿಸಿಕೊಂಡು ಪಾಲಿಕೆ ಸಭೆಯು ದಿನಾಂಕ:26-02-2014ರ ವಿಷಯದ ಸಂಖ್ಯೆ:18(214) 2013-14ರಲ್ಲಿ ತೀರ್ಮಾನಿಸಿರುವ ಮೇರೆಗೆ, ನೇಮಿಸಿರುವ ವ್ಯಾಲೂಯೇಟರ್‌ರವರು ಸದರಿ ಸಂಕೀರ್ಣದ ಗುತ್ತಿಗೆ ದರವನ್ನು ನಿಗದಿಪಡಿಸಿದ್ದು ವ್ಯಾಲ್ಯೂಯೇಷನ್ ಪ್ರಕಾರ ರೂ.15 ರಂತೆ ಒಂದು ಚದರಡಿಗೆ ದರದಲ್ಲಿಯೇ ಪಾವತಿಸಿಕೊಂಡು ದರ ನಿಗದಿಯಾಗಿರುತದೆ. |
| 6 | 01.04.2015 ರಿಂದ 31.03.2016 | 7672913 | 330000 | 7342913 | |

| | | |
|---|---|---|
| 01-04-2010 ರಿಂದ 31-03-2014 8620 **X** 48ಸಿ.ಎಸ್.ಟಿ | 413760 | |
| 01-04-2014 ರಿಂದ 31-03-2016 24 ತಿಂಗಳು ಸಿ.ಎಸ್.ಟಿ | 336091 | |
| ಬಡ್ಡಿ | 1778834 | + ಮಾಸಿಕ ಶೇಕಡ 2 ರಷ್ಟು ಬಡ್ಡಿ ಸಹಿತ ಸೇರಿಸಲಾಗಿದೆ |
| ಮೊತ್ತ | 9871598 | |
| ಕೇಂದ್ರ ಸೇವಾ ಶುಲ್ಕ ಪಾವತಿಸಿರುವ ಕಡಿತ ಮೊತ್ತ | 185400 | |
| **ಒಟ್ಟು ಮೊತ್ತರೂ** | **9686198** | |

ಬಾಕಿ ಪಟ್ಟಿಯಲ್ಲಿ ನಮೂದಿಸಿರುವಂತೆ 1987 ರಿಂದ ಮಾರ್ಚ್ 2016 ರವರೆಗೆ ರೂ.9686198/-ಗಳ ವ್ಯತ್ಯಾಸದ ಮೊತ್ತ ಪಾವತಿಸಬೇಕಾಗಿರುತ್ತದೆ.

ದಿನಾಂಕ: 29.09.2013ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯಲ್ಲಿ ತೀರ್ಮಾನದವಾದ ಅಧಿಕ ವಿಷಯದ ಸಂಖ್ಯೆ:15(52)2013-14ರ ನಿರ್ಣಯವು ಈ ಕೆಳಗಿನಂತಿರುತ್ತದೆ.

> **"ನಿರ್ಣಯ: ಆಯುಕ್ತರವರು ದಿನಾಂಕ: 26.09.2013ರ ಟಿಪ್ಪಣಿಯನ್ನು ಒಪ್ಪುತ್ತಾ ರಾಜಾಜಿನಗರ ವಾಣಿಜ್ಯ ಸಂಕೀರ್ಣ 1ನೇ ಮಹಡಿಯಲ್ಲಲಿರುವ ಮೆ:ಜಿಂದಾಲ್ ಚಾರಿಟಬಲ್ ಆಸ್ಪತ್ರೆಯವರಿಗೆ ಈ ಹಿಂದೆ ಬಾಡಿಗೆ ಆಧಾರದ ಮೇಲೆ ನೀಡಲಾಗಿದ್ದು, ಬಾಡಿಗೆಯನ್ನು ಇತ್ತಿಚೆಗೆ ಪರಿಷ್ಕರಿಸಲಾಗಿದೆ. ಸದರಿ ಸಂಸ್ಥೆಯು ಲಾಭಾದಾಯಕ ಸಂಸ್ಥೆ ಆಗಿಲ್ಲದೇ ಇರುವುದರಿಂದ ಈ ಹಿಂದೆ ನಿಗದಿಪಡಿಸಿದ ಬಾಡಿಗೆಯನ್ನ ಮುಂದುವರೆಸಿ, ಪರಿಷ್ಕರಿಸಿ ನೀಡಿರುವ ಒಟ್ಟು ಮೊತ್ತ ರೂ.23,67,801/-ಗಳನ್ನು ಮನ್ನಾ ಮಾಡಿ 30 ವರ್ಷಗಳ ಗುತ್ತಿಗೆ ಅವಧಿಯನ್ನು ನವೀಕರಿಸಲು ಆಯುಕ್ತರವರು ಅಗತ್ಯ ಕ್ರಮ ಕೈಗೊಳ್ಳುವುದೆಂದು ಸಭೆಯು ತೀರ್ಮಾನಿಸಿರುತ್ತದೆ".**

ತದನಂತರ ದಿ: 09-07-2014ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ತೀರ್ಮಾನವಾದ ವಿಷಯದ ಸಂಖ್ಯೆ: 02(52)/2014-2015ರ ನಿರ್ಣಯವು ಈ ಕೆಳಗಿನಂತೆ ಇರುತ್ತದೆ.

**"ನಿರ್ಣಯ: ಆಯುಕ್ತರವರು ದಿನಾಂಕ: 04-06-2014ರ ಟಿಪ್ಪಣಿಯನ್ನು ಭಾಗಶಃ ಒಪ್ಪುತ್ತಾ, ಜಿಂದಾಲ್ ಚಾರಿಟಬಲ್ ಸಂಸ್ಥೆಯು ಇಂದು ಸೇವಾ ಸಂಸ್ಥೆಯಾಗಿದ್ದು, ಪರಿಷ್ಕರಿಸಿದ ಮೊತ್ತ ರೂ.23,67,801/-ಗಳನ್ನು ಮನ್ನಾ ಮಾಡಿ ದಿ: 01-04-2010 ರಿಂದ 31-03-2015 ರವರೆಗೆ ಗುತ್ತಿಗೆ ಅವಧಿಯನ್ನು ನವೀಕರಿಸುವುದೆಂದು ಸಭೆಯು ತೀರ್ಮಾನಿಸಲಾಯಿತು".**

ಮುಂದುವರೆದಂತೆ, ದಿ: 25-03-2015ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯಲ್ಲಿ ತೀರ್ಮಾನವಾದ ವಿಷಯದ ಸಂಖ್ಯೆ: 443/2014-2015ರ ನಿರ್ಣಯವು ಈ ಕೆಳಗಿನಂತೆ ಇರುತ್ತದೆ.

**"ನಿರ್ಣಯ: ವಾರ್ಡ್-99, ರಾಜಾಜಿನಗರ ವಾರ್ಡಿನ ವ್ಯಾಪ್ತಿಯಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವಾಣಿಜ್ಯ ಸಂಕೀರ್ಣದಲ್ಲಿರುವ ಜಿಂದಾಲ್ ಧರ್ಮಾರ್ಥ ಆಸ್ಪತ್ರೆಯನ್ನು ಜಿಂದಾಲ್ ಸಂಸ್ಥೆಯವರಿಗೆ ಮಾಸಿಕ ರೂ.5,000/-ಗಳ ಬಾಡಿಗೆ ಆಧಾರದ ಮೇಲೆ ನೀಡಲು ಆಯುಕ್ತರು ಅಗತ್ಯ ಕ್ರಮ ವಹಿಸುವುದೆಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು.**

**ದಿನಾಂಕ: 25-03-2015ರ ಪಾಲಿಕೆ ಸಭೆಯ ವಿಷಯದ ಸಂಖ್ಯೆ: 443/2014-15ರಲ್ಲಿ ಸದರಿ ಮಳಿಗೆಗಳಿಗೆ ಮಾಸಿಕ ರೂ.5000/-ಗಳನ್ನು ಬಾಡಿಗೆ ಆದಾರದ ಮೇಲೆ ನೀಡಲು ಸ್ವಯಂ ಪ್ರೇರಿತವಾಗಿ ತೀರ್ಮಾನಿಸಲಾಗಿರುವುದು ಪಾಲಿಕೆಯ ಅರ್ಥಿಕ ಹಿತಾಸಕ್ತಿಗೆ ಹಾಗೂ ದಿನಾಂಕ: 20-06-2011ರ ಸರ್ಕಾರದ ಆದೇಶಕ್ಕೆ ವಿರುದ್ಧವಾಗಿದ್ದು ಇದನ್ನು ರದ್ದುಗೊಳಿಸಲು ಸರ್ಕಾರಕ್ಕೆ ಪತ್ರ ಮುಖೇನ ಕೋರಬಹುದಾಗಿದೆ.**

**ಮೇಲ್ಕಂಡ ಅಂಶಗಳನ್ನು ಅವಗಾಹನೆಗೆ ಇರಿಸಿ ಪಾಲಿಕೆಯ ಆಡಳಿತಾತ್ಮಕ ಹಾಗೂ ಆರ್ಥಿಕ ಹಿತದೃಷ್ಟಿಯಿಂದ, ಸದರಿ ಸಂಸ್ಥೆಯಿಂದ ಬರಬೇಕಾದ ಬಾಕಿ ಮೊತ್ತ ರೂ.96,86,198/- ಗಳನ್ನು ಪಾವತಿಸಿಕೊಂಡು ಹಾಗೂ ಕ್ಷೇತ್ರದ ಬಡ ಜನತೆ ಆಸರೆಯಾಗಿರುವ ಆಸ್ಪತ್ರೆಯ ಗುತ್ತಿಗೆ ಅವಧಿಯನ್ನು ನವೀಕರಿಸಿ ಮುಂದುವರೆಸುವ ಕುರಿತು ಮೇಲ್ಕಂಡ ಪ್ರಸ್ತಾವನೆಯನ್ನು ಜಂಟಿ ಸಭೆಯ ಮುಂದೆ ತೀರ್ಮಾನಕ್ಕಾಗಿ ಮಂಡಿಸಿರುವ ಟಿಪ್ಪಣಿ.**

**-ಸ್ಥಳ ಪರಿಶೀಲನೆಗಾಗಿ ಮುಂದೂಡಿದೆ-**

## ***9]. ವಿಷಯದ ಸಂಖ್ಯೆ: ತೆಆಸ್ಥಾಸ/87/2015-16***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 23.03.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅರಣ್ಯ ಘಟಕದ ವ್ಯಾಪ್ತಿಗೆ ಬರುವ 8 ವಲಯಗಳಲ್ಲಿ 2015-16 ನೇ ಸಾಲಿಗೆ ನೆಡುತೋಪು ನಿರ್ಮಾಣ ಮತ್ತು ನಿರ್ವಹಣೆ, ಹಳೆಯ ನೆಡುತೋಪು ನಿರ್ವಹಣೆ, ಸಸ್ಯ ಕ್ಷೇತ್ರಗಳಲ್ಲಿ ಸಸಿಗಳನ್ನು ನಿರ್ವಹಿಸುವ ಒಟ್ಟು ರೂ. 1187.37 ಲಕ್ಷಗಳ ಕಾಮಗಾರಿಗಳಿಗೆ ಜಾಬ್‌ಸಂಖ್ಯೆ ನೀಡಲು ತೋಟಗಾರಿಗೆ ಸ್ಥಾಯಿ ಸಮಿತಿಯ ನಿರ್ಣಯ ಸಂಖ್ಯೆ 10/2015-16/ ದಿನಾಂಕ: 06-11-2016ರಲ್ಲಿ ನಿರ್ಣಯಿಸಿ ಅನುಮೋದನೆ ನೀಡಿರುತ್ತದೆ.

| ಕ್ರ.ಸಂ | ಪಿ-ಕೋಡ್ | ಲೆಕ್ಕಶೀರ್ಷಿಕೆ | ಆಯವ್ಯಯದಲ್ಲಿ ಮೀಸಲಿಟ್ಟ ಅನುದಾನ | ಜಾಬ್ ಸಂಖ್ಯೆಯ ಮೊತ್ತ | ಉಳಿಕೆ ಅನುದಾನ | ಕೊರತೆ ಅನುದಾನ |
|---|---|---|---|---|---|---|
| 1 | P0314 | Avenue Plantation, Tree Survey & Numbering | 1500.00 | 0.00 | 1500.00 | - |
| 2 | P1855 | Maintenance of Old Plantation raised in BBMP Areas | 300.00 | 203.35 | 96.65 | - |
| 3 | P1846 | Production of Seedlings in Nurseries | 100.00 | 125.75 | - | **25.75** |

| | | | | | | |
|---|---|---|---|---|---|---|
| 4 | P1856 | Maintenance of Seedings raised during prv years | 10.00 | 29.43 | - | **19.43** |
| 5 | P1701 | Tree Canopy Management | 500.00 | 828.84 | - | **328.84** |
| | **Total** | | **2410.00** | **1187.37** | **1596.65** | **374.02** |

ಮೇಲ್ಕಂಡಂತೆ ಅರಣ್ಯ ಘಟಕದ ಲೆಕ್ಕಶೀರ್ಷಿಕೆ ಪಿ–0314 ಅಡಿ ರೂ. 1500.00 ಲಕ್ಷಗಳ ಅನುದಾನ ಲಭ್ಯವಿದ್ದು ಸದರಿ ಲೆಕ್ಕಶೀರ್ಷಿಕೆಯಡಿ ಪ್ರಸ್ತುತ ಸಾಲಿನಲ್ಲಿ ರೂ. 1500.00 ಲಭ್ಯವಿರುತ್ತದೆ. ಲೆಕ್ಕಶೀರ್ಷಿಕೆ ಪಿ1846 ರಡಿ ರೂ. 25.75 ಲಕ್ಷಗಳು, ಪಿ1856 ಅಡಿ ರೂ. 19.43 ಲಕ್ಷಗಳು ಹಾಗೂ ಪಿ1701 ಅಡಿ ರೂ. 328.84 ಲಕ್ಷಗಳ ಅನುದಾನ ಒಟ್ಟು ರೂ. 374.02 ಲಕ್ಷಗಳ ಕೊರತೆ ಇರುತ್ತದೆ. ಸದರಿ ಕೊರತೆ ಅನುದಾನವನ್ನು ಲೆಕ್ಕಶೀರ್ಷಿಕೆ ಪಿ–0314 ರಿಂದ ಅನುದಾನ ಮರುಹೊಂದಾಣಿಕೆ ಮಾಡಬೇಕಿದೆ.

ಆದ್ದರಿಂದ ಪಿ0314 ರಿಂದ ಲೆಕ್ಕಶೀರ್ಷಿಕೆ ಪಿ1846 ಗೆ ರೂ. 25.75 ಲಕ್ಷಗಳು, ಪಿ1856 ಗೆ ರೂ. 19.43 ಲಕ್ಷಗಳು ಹಾಗೂ ಪಿ1701 ಗೆ 328.84 ಲಕ್ಷಗಳ ಅನುದಾನ ಮರುಹೊಂದಾಣಿಕೆ ಮಾಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 23.03.2016ರ ಪ್ರಸ್ತಾವನೆಯಲ್ಲಿ ತಿಳಿಸಿರುವಂತೆ ಕ್ರಮ ಸಂಖ್ಯೆ: 03ರ** P-1846, Prouduction of Seedlings in Nurseries **ಕೊರತೆ ಅನುದಾನ ರೂ.25.75 ಲಕ್ಷಗಳಿಗೆ ಮತ್ತು ಕ್ರಮ ಸಂಖ್ಯೆ: 04ರ** P-1856, Maintenance of Seedlings in raised during prv years **ಕೊರತೆ ಅನುದಾನ ರೂ.19.43 ಲಕ್ಷಗಳಿಗೆ ಮಾತ್ರ ಮರುಹೊಂದಾಣಿಕೆ ಮಾಡಲು ಒಪ್ಪುತ್ತಾ, ಕ್ರಮ ಸಂಖ್ಯೆ: 05ರ** P-1701, Tree Canopy Management **ಕೊರತೆ ಅನುದಾನ ರೂ.328.84 ಲಕ್ಷಗಳನ್ನು ಕೈಬಿಡುವುದೆಂದು ಸಮಿತಿಯು ತೀರ್ಮಾನಿಸಿತು.**

***10]. ವಿಷಯದ ಸಂಖ್ಯೆ: ತೆಆಸ್ಥಾಸ/88/2016–17***

ವಿಶೇಷ ಆಯುಕ್ತರು (ಹಣಕಾಸು) ರವರ ಟಿಪ್ಪಣಿ ದಿನಾಂಕ: 20.03.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಮುಖ್ಯ ಅಭಿಯಂತರರು (ರಸ್ತೆ ಮೂಲಭೂತ ಸೌಕರ್ಯ) ರವರು ಆರ್ಟಿರಿಯಲ್, ಸಬ್ ಆರ್ಟಿರಿಯಲ್ ಮತ್ತು ಇತರ ಪ್ರಮುಖ ರಸ್ತೆಗಳ ಗುಂಡಿ ಮುಚ್ಚುವ 26 ಕಾಮಗಾರಿಗಳ ಅಂದಾಜು ಮೊತ್ತ ರೂ. 1064.40 ಲಕ್ಷಗಳಿಗೆ 2015–16 ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ P1924- Maintenance of Roads and Flyovers ಅಡಿ ಜಾಬ್‌ಸಂಖ್ಯೆ ನೀಡಲು ಪ್ರಸ್ತಾವನೆ ಸಲ್ಲಿಸಿರುತ್ತಾರೆ. 2015–16ರ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ1924 ರ ಚಾಲ್ತಿ ಕಾಮಗಾರಿಗಳ ಅಡಿ ರೂ. 2000.00 ಲಕ್ಷಗಳ ಅನುದಾನ ಮೀಸಲಿರಿಸಿದ್ದು, ಇದುವರೆವಿಗೆ ರೂ. 1025.70 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲಾಗಿದ್ದು, ರೂ. 974.30 ಲಕ್ಷಗಳ ಅನುದಾನ ಆಯವ್ಯಯದಲ್ಲಿ ಲಭ್ಯವಿರುತ್ತದೆ. ಪ್ರಸ್ತಾವನೆಯ ಮೊತ್ತ ರೂ. 1064.40 ಲಕ್ಷಗಳಿಗೆ ಜಾಬ್‌ಸಂಖ್ಯೆ ನೀಡಲು ರೂ. 90.10 ಲಕ್ಷಗಳ ಅನುದಾನ ಕೊರತೆ ಇರುತ್ತದೆ. ಮಾನ್ಯ ಆಯುಕ್ತರು reappropriation ಮಾಡಲು ಕ್ರಮ ವಹಿಸಲು ಆದೇಶಿಸಿರುತ್ತಾರೆ.

ಮುಖ್ಯ ಲೆಕ್ಕಾಧಿಕಾರಿಗಳು ಸಲ್ಲಿಸಿರುವ ವಿವರದಂತೆ 2015–16ರ ಆಯವ್ಯಯದ ಲೆಕ್ಕಶೀರ್ಷಿಕೆ ತುರ್ತು ಮೀಸಲು ನಿಧಿ ಪಿ0541 ಅಡಿ Pending Bills & Spillover works ಅಡಿ ದಿನಾಂಕ: 18–01–2016ರ ವರೆಗೆ ಬಾಕಿ ಇದ್ದ ರೂ. 3518–00 ಲಕ್ಷಗಳ ಅನುದಾನದಲ್ಲಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ನಡವಳಿ ಸಂಖ್ಯೆ ತೆ.ಆಸ್ಥಾ.ಸ/46/2015–16/ ದಿನಾಂಕ 01–02–2016 ರ ತಿರ್ಮಾನದಂತೆ ಮತ್ತು ಮಾನ್ಯ ಆಯುಕ್ತರ ಕಛೇರಿ ಆದೇಶ ಸಂಖ್ಯೆ ಮುಲೆಅ/ಪಿಆರ್/6126/ 15–16/ದಿನಾಂಕ 11–02–2016 ರ ಆದೇಶದಂತೆ ಮೇಲ್ಕಂಡ

ರೂ. 3518.00 ಲಕ್ಷಗಳಲ್ಲಿ ರೂ. 2200.00 ಲಕ್ಷಗಳ ಅನುದಾನವನ್ನು ಲೆಕ್ಕಶೀರ್ಷಿಕೆ ಪಿ–0190 ಪೂಜ್ಯ ಮಹಾಪೌರರ ಅನುದಾನದ ಚಾಲ್ತಿ ಕಾಮಗಾರಿಗಳಿಗೆ ಅನುದಾನ ಮರುಹೊಂದಾಣಿಕೆ (Reappropriation) ಮಾಡಲಾಗಿದ್ದು, ರೂ. 1318.00 ಲಕ್ಷಗಳ ಅನುದಾನ ಲಭ್ಯವಿರುತ್ತದೆ.

ಸಾರ್ವಜನಿಕ ಹಿತದೃಷ್ಟಿಯಿಂದ ರಸ್ತೆ ಗುಂಡಿ ಮುಚ್ಚುವ ಕಾಮಗಾರಿಗಳನ್ನು ತುರ್ತಾಗಿ ಕೈಗೊಳ್ಳಬೇಕಿದೆ. ಲೆಕ್ಕಶೀರ್ಷಿಕೆ ಪಿ–0541 ರ Pending Bills & Spillover works ಅಡಿ ಲಭ್ಯವಿರುವ ರೂ.1318.00 ಲಕ್ಷಗಳ ಅನುದಾನದಲ್ಲಿ ರೂ. 90.10 ಲಕ್ಷಗಳ ಅನುದಾನವನ್ನು ಲೆಕ್ಕಶೀರ್ಷಿಕೆ ಪಿ–1924ಗೆ ಅನುದಾನ ಮರುಹೊಂದಾಣಿಕೆ (Reappropriation) ಮಾಡಲು ಅನುಮೋದನೆಗಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**ನಿರ್ಣಯ: ವಿಶೇಷ ಆಯುಕ್ತರು (ಹಣಕಾಸು) ರವರ ದಿನಾಂಕ: 20.03.2016ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

***11]. ವಿಷಯದ ಸಂಖ್ಯೆ: ತೆಆಸ್ಥಾಸ/89/2016–17***

ವಿಶೇಷ ಆಯುಕ್ತರು (ಹಣಕಾಸು) ರವರ ಟಿಪ್ಪಣಿ ದಿನಾಂಕ: 20.03.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಶ್ರೀ. ಎಂ.ಶ್ರೀನಿವಾಸನ್, ಪ್ರಧಾನ ಕಾರ್ಯದರ್ಶಿ, ಅಖಿಲ ಕರ್ನಾಟಕ ಅಭಿನಯ ರಂಗಭೂಮಿ ಕಲಾ ಪರಿಷತ್ (ರಿ), ನಂ.1341, 18ನೇ 'ಎ' ಮುಖ್ಯರಸ್ತೆ, 2ನೇ ಹಂತ, ಜೆ.ಪಿ.ನಗರ, ಬೆಂಗಳೂರು–78 ರವರು ರವರು ಪೂಜ್ಯ ಮಹಾಪೌರರಿಗೆ ಮನವಿ ಸಲ್ಲಿಸಿ ಸಂಘದ 27ನೇ ವಾರ್ಷಿಕೋತ್ಸವ, ಕನ್ನಡ ರಾಜ್ಯೋತ್ಸವ ಹಾಗೂ ಬೆಂಗಳೂರು ನಿರ್ಮಾತೃ ಕೆಂಪೇಗೌಡ ಜನ್ಮ ದಿನೋತ್ಸವ ಅಂಗವಾಗಿ ರಾಜ್ಯಮಟ್ಟದ ಕನ್ನಡ ಪೌರಾಣಿಕ ರಂಗೋತ್ಸವ, ರಂಗ ಸಂಗೀತೋತ್ಸವ, ರಂಗ ದೃಶ್ಯಾವಳಿಗಳು, ರಂಗ ವಿಚಾರ ಸಂಕೀರಣ ಹಾಗೂ ಜನಪದ ಶೈಲಿಗಳನ್ನೊಳಗೊಂಡಂತೆ ಸಾಂಸ್ಕೃತಿಕ ಉತ್ಸವಗಳನ್ನು ದಿನಾಂಕ:01–07–2015 ರಿಂದ 05–07–2015ರವರಿಗೆ ಪ್ರತಿದಿನ ಸಂಜೆ 6–00 ರಿಂದ ರಾತ್ರಿ 11–00 ಘಂಟೆಯವರೆಗೆ ಸಲ್ಲಾಪುರಮ್ಮ ದೇವಸ್ಥಾನದ ಆವರಣ, ದಾಮೋದರ ರಾಜು ಬಯಲು ರಂಗ ಮಂದಿರ, ಮಾರೇನಹಳ್ಳಿ, ಜೆ.ಪಿ.ನಗರ 2ನೇ ಹಂತ, ಬೆಂಗಳೂರು ಇಲ್ಲಿ ಕಾರ್ಯಕ್ರಮ ನಡೆಸಲಾಗಿರುತ್ತದೆ. 2014–15ನೇ ಸಾಲಿನಲ್ಲಿ ಪೌರಾಣಿಕ ರಂಗೋತ್ಸವಗಳಿಗೆ ರೂ.5.00 ಲಕ್ಷಗಳು ವೆಚ್ಚ ಮಾಡಲಾಗಿದೆ ಹಾಗೂ 2015–16ನೇ ಸಾಲಿನ ರಂಗೋತ್ಸವ ಕಾರ್ಯಕ್ರಮಗಳಿಗೆ ರೂ.5.00 ಲಕ್ಷಗಳು ವೆಚ್ಚವಾಗಿದ್ದು, ಸದರಿ ಎರಡೂ ಕಾರ್ಯಕ್ರಮಗಳಿಗೆ ವೆಚ್ಚವಾಗಿರುವ ಒಟ್ಟು ಮೊತ್ತ ರೂ.10.00 ಲಕ್ಷಗಳನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ನೀಡಲು ಕೋರಿರುತ್ತಾರೆ. ಶ್ರೀ. ರಾಮಲಿಂಗರೆಡ್ಡಿ, ಸಾರಿಗೆ ಸಚಿವರು ಅನುದಾನ ಬಿಡುಗಡೆ ಮಾಡಲು ಶಿಫಾರಸ್ಸು ಮಾಡಿರುತ್ತಾರೆ.

ಪಾಲಿಕೆಯ ಸಭೆಯ ವಿಷಯ ಸಂಖ್ಯೆ:459/2014–15 ದಿನಾಂಕ:20–03–2015 ರಂದು ಅನುಮೋದಿಸಿ, ತಿದ್ದುಪಡಿ ಮಾಡಿ ತೀರ್ಮಾನಿಸಿರುವಂತೆ, ಮಾನ್ಯ ಆಡಳಿತಗಾರರ ಅನುಮೋದನೆ ನಡುವಳಿ ವಿಷಯ ಸಂಖ್ಯೆ, 61/2015–16 ದಿ:15–05–2015 ಹಾಗೂ ಸರ್ಕಾರದ ಆದೇಶ ಸಂಖ್ಯೆ ನಇ/608/ ಎಂಎನ್ವೈ 2015 ದಿ:29–05–2015ರ ರೀತ್ಯಾ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2015–16ನೇ ಸಾಲಿನ ಆಯವ್ಯಯದಲ್ಲಿ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ರೂ. 50.00 ಲಕ್ಷಗಳನ್ನು ಮೀಸಲಿರಿಸಿಲಾಗಿರುತ್ತದೆ.

ತತ್ಸಂಬಂಧವಾಗಿ, ಮೇಲಿನ ಅಂಶಗಳನ್ನು ಸ್ಥಾಯಿ ಸಮಿತಿಯ ಆದ್ಯ ಗಮನಕ್ಕೆ ತರುತ್ತಾ, ಅಖಿಲ ಕರ್ನಾಟಕ ಅಭಿನಯ ರಂಗಭೂಮಿ ಕಲಾ ಪರಿಷತ್ (ರಿ), ರವರಿಗೆ ಅನುದಾನ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಸದರಿ ಸಂಸ್ಥೆಗೆ ರೂ.50.00 ಸಾವಿರ (ಐವತ್ತು ಸಾವಿರ ಮಾತ್ರ) ಅನುದಾನವನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.**

## *12]. ವಿಷಯದ ಸಂಖ್ಯೆ: ತೆಆಸ್ಥಾಸ/01/2016-17*

ವಿಶೇಷ ಆಯುಕ್ತರು (ಕಲ್ಯಾಣ) ರವರ ಟಿಪ್ಪಣಿ ದಿನಾಂಕ: 04.03.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 89 ಶಿಶುವಿಹಾರಗಳು ಕಾರ್ಯನಿರ್ವಹಿಸುತ್ತಿದ್ದು, ಮಕ್ಕಳ ದಾಖಲಾತಿ ಗಣನೀಯವಾಗಿ ಕಡಿಮೆಯಾಗುತ್ತಿರುತ್ತದೆ. ಆಯವ್ಯಯದಲ್ಲಿ ಅನುದಾನ ಲಭ್ಯತೆ ಇದ್ದರೂ ಸಹ ಶಿಶುವಿಹಾರಗಳಿಗೆ ಕಳೆದ 2 ವರ್ಷದಿಂದಲೂ ಸಾದಿಲ್ವಾರು ಸಾಮಗ್ರಿಗಳನ್ನು ನೀಡಿರುವುದಿಲ್ಲ. ಪಾಲಿಕೆಯ ಶಾಲೆಗಳಲ್ಲಿ ಕ್ರೀಯಾಶೀಲತೆಯನ್ನು ಅಭಿವೃದ್ಧಿಪಡಿಸುವ ಹಾಗೂ ಪಾಲಿಕೆಯ ಶಿಶುವಿಹಾರಗಳನ್ನು ಉನ್ನತ ಮಟ್ಟಕ್ಕೇರಿಸುವ ಸಂಬಂಧ ಅಗತ್ಯ ಸೌಕರ್ಯ ಹಾಗೂ ಅಗತ್ಯ ಸೌಲಭ್ಯವನ್ನು ನಿಗಧಿತ ಅವಧಿಯಲ್ಲಿ ನೀಡುವುದು ಅತ್ಯಾವಶ್ಯಕವಾಗಿರುತ್ತದೆ.

ಆದರೆ, ಈಗಾಗಲೇ ಶಿಶುವಿಹಾರಗಳು ಪ್ರಾರಂಭಗೊಂಡು ಅರ್ಧ ಶೈಕ್ಷಣಿಕ ವರ್ಷ ಮುಕ್ತಾಯ ಗೊಂಡಿರುವುದರಿಂದ ಶಿಶುವಿಹಾರಗಳ ಕೆಲಸ ಕಾರ್ಯಗಳ ಹಿತದೃಷ್ಟಿಯಿಂದ ಸಾದಿಲ್ವಾರು ಸಾಮಗ್ರಿಗಳ ಖರೀದಿಗೆ ತಗಲುವ ವೆಚ್ಚವನ್ನು ಆಯಾ ಶಿಶುವಿಹಾರಗಳ ಮಕ್ಕಳ ಸಂಖ್ಯಾಬಲದನುಸಾರ, ಈ ಕೆಳಕಂಡಂತೆ ಪ್ರೋರೇಟಾ ಮೂಲಕ ಹಂಚಿಕೆ ಮಾಡಲಾಗಿರುತ್ತದೆ.

ಶಿಶುವಿಹಾರಗಳ ಸಾದಿಲ್ವಾರು ಖರೀದಿಗಾಗಿ 2015-16ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ 25 ಸಾಮಾನ್ಯ ವೆಚ್ಚಗಳು ಶಿಶುವಿಹಾರಗಳ ಸಾದಿಲ್ವಾರುಗಳು P0081ರಲ್ಲಿ ರೂ.5.00 ಲಕ್ಷಗಳ ಅನುದಾನವನ್ನು ನಿಗಧಿಪಡಿಸಲಾಗಿರುತ್ತದೆ.

**ಖಾಯಂ ಶಿಕ್ಷಕರು ಕಾರ್ಯನಿರ್ವಹಿಸುತ್ತಿರುವ ಶಿಶುವಿಹಾರದ ಅಂದಾಜು ವಿದ್ಯಾರ್ಥಿಗಳ ಸಂಖ್ಯಾಬಲದ ವಿವರ.**

| ಕ್ರ.ಸಂ. | ಶಿಶುವಿಹಾರಗಳ ಹೆಸರು | ಅಂದಾಜು ವಿದ್ಯಾರ್ಥಿಗಳ ಸಂಖ್ಯೆ |
|---|---|---|
| 1 | ರಾಮಮೋಹನಪುರ | 50 |
| 2 | ನೀಲಸಂದ್ರ | 91 |
| 3 | ರಾಜಾಜಿನಗರ | 100 |
| 4 | ಸ್ವಿಮಿಂಗ್ ಫೂಲ್ಎಕ್ಸ್‌ಟೆನ್ಷನ್ | 54 |
| 5 | ಗೌತಮಪುರ | 30 |
| 6 | ಜೋಗುಪಾಳ್ಯ | 25 |
| 7 | ದಯಾನಂದನಗರ | 40 |
| 8 | ಜಕ್ಕರಾಯನಕೆರೆ | 35 |
| 9 | ಯಶವಂತಪುರ | 60 |
| 10 | ಆಡುಗೋಡಿ | 30 |
| 11 | ಗಂಗಾನಗರ | 80 |
| 12 | ಭಾಷ್ಯಂಪಾರ್ಕ್ | 25 |
| 13 | ಗೋಪಾಲ ಸ್ವಾಮಿಅಯ್ಯರ್ ಕಾಲೋನಿ | 20 |
| 14 | ಎ.ಕೆ. ಕಾಲೋನಿ | 65 |
| 15 | ವಸಂತನಗರ | 20 |
| 16 | ಗೋವಿಂದರಾಜನಗರ | 25 |
| 17 | ಗಾಯತ್ರಿದೇವಿ ಪಾರ್ಕ್ | 38 |
| 18 | ಆಂಜನಪ್ಪಗಾರ್ಡನ್ | 80 |
| 19 | ಬೀರದೇವರಗುಡಿ | 60 |
| 20 | ಪಿಟ್ ಕಾಲೋನಿ | 34 |
| 21 | ಶ್ರೀರಾಮಪುರ | 60 |
| 22 | ಕೆಂಪೇಗೌಡ ನಗರ | 60 |
| 23 | ಬ್ರಾಡ್ವೆ | 30 |
| 24 | ಮಾರೇನಹಳ್ಳಿ | 30 |
| 25 | ದಿನ್ನೂರು | 80 |

| | | |
|---|---|---|
| 26 | ಅಜಾದ್‌ನಗರ | 120 |
| 27 | ಟಾಟಾ ಸಿಲ್ಕ್ ಫಾರಂ | 35 |
| 28 | ಮಾಗಡಿರಸ್ತೆ | 100 |
| 29 | ಮುತ್ಯಾಲನಗರ | 78 |
| 30 | ವಾಲ್ಮೀಕಿನಗರ | 125 |
| 31 | ಜಲಕಂಠೇಶ್ವರನಗರ | 108 |
| 32 | ಕಲಾಸಿಪಾಳ್ಯ | 60 |
| 33 | ಸೆಂಟ್ರಲ್ ಬಜಾರ್ | 30 |
| 34 | ಬನ್ನಪ್ಪ ಪಾರ್ಕ್ | 26 |
| 35 | ಅಕ್ಕಿಪೇಟೆ | 32 |
| 36 | ಅಶೋಕ ನಗರ | 25 |
| 37 | ಚಿನ್ನಯ್ಯನಪಾಳ್ಯ | 51 |
| 38 | ಲಕ್ಕಸಂದ್ರ | 104 |
| 39 | ಸುಬ್ರಮಣ್ಯನಗರ | 43 |
| 40 | ಯಡಿಯೂರು | 26 |
| 41 | ಶಿವನ ಶೆಟ್ಟಿಗಾರ್ಡನ್ | 24 |
| 42 | ಕೆ.ಜಿ. ನಗರ | 60 |
| 43 | ತಾವರೆಕೆರೆ | 45 |
| 44 | ಕಬ್ಬನ್‌ಪೇಟೆ | 30 |
| 45 | ಹಲಸೂರು | 45 |
| **ಒಟ್ಟು** | | **2389** |

## ಖಾಯಂ ಶಿಕ್ಷಕರಿಲ್ಲದ ಶಿಶುವಿಹಾರದ ಅಂದಾಜುವಿದ್ಯಾರ್ಥಿಗಳ ಸಂಖ್ಯಾಬಲದ ವಿವರ.

| ಕ್ರ. ಸಂ. | ಶಿಶುವಿಹಾರಗಳ ಹೆಸರು | ಪ್ರೌಢಶಾಲೆಯ ಹೆಸರು | ಅಂದಾಜು ವಿದ್ಯಾರ್ಥಿಗಳ ಸಂಖ್ಯೆ |
|---|---|---|---|
| 1 | ಕೋರಮಂಗಲ | ಬೈರಸಂದ್ರ | 25 |
| 2 | ಕೋಡಿಹಳ್ಳಿ | | 35 |
| 3 | ಕನಕನಪಾಳ್ಯ | | 28 |
| 4 | ಬೈರಸಂದ್ರ | | 29 |
| 5 | ರಿಚ್‌ಮಂಡ್‌ಟೌನ್ | ಶಾಂತಿನಗರ | 50 |
| 6 | ಕ್ಲೀವ್‌ಲ್ಯಾಂಡ್‌ಟೌನ್ | ಕ್ಲೀವ್‌ಲ್ಯಾಂಡ್‌ಟೌನ್ | 25 |
| 7 | ಗಾಂಧಿಗ್ರಾಮ | | 14 |
| 8 | ದೊಮ್ಮಲೂರು | ಜೋಗುಪಾಳ್ಯ | 12 |
| 9 | ದೂಪನಹಳ್ಳಿ | | 50 |
| 10 | ಶಾಸ್ತ್ರಿನಗರ | ಕೆ.ಜಿ.ನಗರ | 55 |
| 11 | ಜೆ.ಜೆ.ಆರ್.ನಗರ. | ಪಾದರಾಯನಪುರ | 45 |
| 12 | ವೆಂಕಟಸ್ವಾಮಿಗಾರ್ಡನ್ | | 33 |
| 13 | ಪಾದರಾಯನಪುರ | | 50 |
| 14 | ಓಲ್ಡ್ ಪೆನ್ಷನ್ ಮೊಹಲ್ | | 44 |
| 15 | ಟಿ.ಸಿ.ಎಮ್. ರಾಯನ್‌ರೋಡ್ | | 30 |
| 16 | ಹನುಮಂತನಗರ | ಬಸವನಗುಡಿ | 29 |
| 17 | ರಾಮಚಂದ್ರಪುರ | ಶ್ರೀರಾಂಪುರ | 70 |

| | | | |
|---|---|---|---|
| 18 | ಭಾರತೀ ನಗರ | ಕಾಕ್ಸ್‌ಟೌನ್ | 27 |
| 19 | ಕಾಕ್ಸ್‌ಟೌನ್ | | 34 |
| 20 | ವಿಲಿಯಮ್ಸ್‌ಟೌನ್ | ಆಸ್ಟೀನ್‌ಟೌನ್ | 31 |
| 21 | ಆಸ್ಟೀನ್ ಟೌನ್ | | 38 |
| 22 | ಫೈರ್ ವರ್ಕ್ಸ್ ಕಾಲೋನಿ | ಬನ್ನಪ್ಪ ಪಾರ್ಕ್ | 40 |
| 23 | ಮಲ್ಲಪ್ಪ ಮಾರ್ಕೆಟ್ | | 25 |
| 24 | ಪಾಯಪ್ಪಗಾರ್ಡನ್ | | 25 |
| 25 | ಮೋತಿನಗರ | | 29 |
| 26 | ಸಂಪಂಗಿರಾಮನಗರ (ಸಂಪಿಗೆ ಹಳ್ಳಿ) | | 50 |
| 27 | ಬಾಗಲೂರ್ ಲೇಔಟ್ | ಪಿಳ್ಳಣ್ಣ ಗಾರ್ಡನ್ | 20 |
| 28 | ಮೆಮೊರಿಯಲ್ ಸ್ಟ್ರೀಟ್ | ಜಯಮಹಲ್ | 21 |
| 29 | ನಾರಾಯಣಪಿಳ್ಳೆ ಸ್ಟ್ರೀಟ್ | | 37 |
| 30 | ಭೈರವೇಶ್ವರನಗರ – 4ನೇ ಕ್ರಾಸ್ | ಭೈರವೇಶ್ವರನಗರ | 49 |
| 31 | ನಂಜರಸಪ್ಪಲೇಔಟ್ | | 35 |
| 32 | ಪಂಚಶೀಲನಗರ | | 49 |
| 33 | ಅನ್ನಪೂರ್ಣೇಶ್ವರಿನಗರ | | 49 |
| 34 | ಭೈರವೇಶ್ವರನಗರ | | 26 |
| 35 | ತುಂಗಾ ನಗರ | ಹೇರೋಹಳ್ಳಿ | 64 |
| 36 | ಪ್ರಸನ್ನಾ ಲೇಔಟ್ | | 54 |
| 37 | ಮಹದೇಶ್ವರ ನಗರ | | 32 |
| 38 | ಮುನೇಶ್ವರನಗರ | | 33 |
| 39 | ಕೆಂಪೇಗೌಡನಗರ (ಹೇರೋಹಳ್ಳಿ) | | 60 |
| 40 | ವಿಘ್ನೇಶ್ವರ ನಗರ | | 26 |
| 41 | ಹೇರೋಹಳ್ಳಿ (ಬ್ಯಾಡರಹಳ್ಳಿ) | | 30 |
| 42 | ಮರ್ಫಿಟೌನ್ | ಮರ್ಫಿಟೌನ್ | 15 |
| 43 | ಮರ್ಫಿರೋಡ್ | | 10 |
| 44 | ಅಶೋಕಪುರ | ಮಾರಪ್ಪನಪಾಳ್ಯ | 30 |
| **ಒಟ್ಟು** | | | **1476** |

| ಕ್ರಮ ಸಂಖ್ಯೆ | ವಿವರ | ಸಂಖ್ಯೆ | ಅಂದಾಜು ವಿದ್ಯಾರ್ಥಿಗಳ ಸಂಖ್ಯಾಬಲ |
|---|---|---|---|
| **01** | **ಖಾಯಂ ಶಿಕ್ಷಕರ ಸಂಖ್ಯೆ** | **45** | **2389** |
| **02** | **ಖಾಯಂ ಶಿಕ್ಷಕರಿಲ್ಲದ ಶಾಲೆಗಳ ಸಂಖ್ಯೆ** | **44** | **1476** |
| **ಒಟ್ಟು** | | **89** | **3865** |

ಮೇಲ್ಕಂಡಂತೆ, ಒಟ್ಟು 45 ಶಿಶುವಿಹಾರಗಳಲ್ಲಿ ಖಾಯಂ ಶಿಕ್ಷಕರಿದ್ದು ಉಳಿದ 44 ಶಾಲೆಗಳಲ್ಲಿ ಖಾಯಂ ಶಿಕ್ಷಕರಿಲ್ಲದಿರುವುದರಿಂದ ಸದರಿ ಶಿಶುವಿಹಾರಗಳ ಸಮೀಪದಲ್ಲಿರುವ ಶಾಲಾ ಕಾಲೇಜು ಮುಖ್ಯಸ್ಥರಿಗೆ ಪ್ರೋರೇಟಾ ಮೂಲಕ ಹಂಚಿಕೆ ಮಾಡಿರುವ ಸಾದಿಲ್ವಾರು ಸಾಮಗ್ರಿಗಳ ಮೊತ್ತವನ್ನು ಆರ್.ಟಿ.ಜಿ.ಎಸ್. ಮೂಲಕ ನೀಡಬೇಕಾಗಿರುತ್ತದೆ.

ಸಾದಿಲ್ವಾರು ಸಾಮಾಗ್ರಿಗಳ ವಿವರ.

| ಕ್ರ.ಸಂ. | ಸಾಮಾಗ್ರಿಯ ಹೆಸರು | ಕ್ರ.ಸಂ. | ಸಾಮಾಗ್ರಿಯ ಹೆಸರು |
|---|---|---|---|
| 1. | ಚಾಕ್‌ಪೀಸ್ | 17 | ಹೈಲೈಟರ್ (ಹಳದಿ) |
| 2. | ಡಸ್ಟರ್ | 18 | ಗುಂಡ್ ಪಿನ್ |
| 3. | ವೈಟ್ ಪೇಪರ್ | 19 | ಪೆನ್ಸಿಲ್ |
| 4. | ಜೆರಾಕ್ಸ್ ಪೇಪರ್ ಫುಲ್ ಸ್ಕೇಪ್ | 20 | ಎರೇಜರ್ |
| 5. | ಜೆರಾಕ್ಸ್ ಪೇಪರ್ ಎ–4 ಸೈಜ್ | 21 | ಪ್ಲಾಸ್ಕ್ |
| 6. | ರೇನಾಲ್ಡ್ಸ್‌ಜೆಟ್ಟರ್ ಬಾಲ್ ಪೆನ್ (ಬ್ಲೂ) | 22 | ಕಫ್‌ಅಂಡ್ ಸಾಸರ್ |
| 7. | ರೇನಾಲ್ಡ್ಸ್‌ಜೆಟ್ಟರ್‌ರಿಫೀಲ್ (ಬ್ಲೂ) | 23 | ಫೆನಾಯಿಲ್ (5 ಲೀಟರ್) |
| 8. | ರೇನಾಲ್ಡ್ಸ್ ಬಾಲ್ ಪೆನ್ (ರೆಡ್) | 24 | ಬ್ಲೀಚಿಂಗ್ ಪೌಡರ್ |
| 9. | ರೇನಾಲ್ಡ್ಸ್ ಬಾಲ್‌ರಿಫೀಲ್ (ರೆಡ್) | 25 | ಕ್ಲಿನಿಂಗ್‌ಕ್ಲಾತ್ |
| 10. | ಸ್ಟೇಪ್ಲರ್ – ಬಿಗ್ | 26 | ವೈಟನರ್‌ಪೆನ್ |
| 11. | ಸ್ಟೇಪ್ಲರ್ –ಸ್ಮಾಲ್ | 27 | ವೈಟನರ್ ಬಾಟಲ್ |
| 12. | ಸ್ಟೇಪ್ಲರ್ ಪಿನ್ –ಬಿಗ್ | 28 | ಪೊರಕೆ |
| 13. | ಸ್ಟೇಪ್ಲರ್ ಪಿನ್ –ಸ್ಮಾಲ್ | 29 | ಕ್ಲಿನಿಂಗ್ ಆಸಿಡ್ |
| 14. | ಕಾರ್ಬನ್ ಪೇಪರ್ | 30 | ಕ್ಲಿನಿಂಗ್ ಮಾಪ್ |
| 15. | ಗಮ್ ಬಾಟಲ್ – ಬಿಗ್ | | |
| 16. | ಗಮ್ ಬಾಟಲ್ – ಸ್ಮಾಲ್ | | |

ಶಿಶುವಿಹಾರ ಸಂಖ್ಯಾಬಲದಆಧಾರ ಪ್ರಮಾಣಾನುಸಾರ (ಪ್ರೋರೇಟಾ ಮೂಲಕ) ಹಂಚಿಕೆ ಮಾಡಿರುವ ಸಾದಿಲ್ವಾರು ಸಾಮಾಗ್ರಿಗಳ ಖರೀದಿಯಅಂದಾಜು ಬಾಬ್ತಿನ ವಿವರ.

| ಕ್ರ.ಸಂ. | ವಿದ್ಯಾರ್ಥಿಗಳ ಸಂಖ್ಯೆ | ಶಾಲೆಗಳ ಸಂಖ್ಯೆ | ಪ್ರತಿ ಶಾಲೆಗೆ ಹಂಚಿಕೆ ಮಾಡಿರುವಅಂದಾಜು ಸಾದಿಲ್ವಾರು ಮೊತ್ತ (ರೂ.ಗಳಲ್ಲಿ) | ಬಿಡುಗಡೆ ಮಾಡಬೇಕಾಗಿರುವಒಟ್ಟುಅಂದಾಜು ಸಾದಿಲ್ವಾರು ಮೊತ್ತ (ರೂ.ಗಳಲ್ಲಿ) |
|---|---|---|---|---|
| 1. | 1 ರಿಂದ 25 | 17 | 1000.00 | 17000.00 |
| 2. | 26 ರಿಂದ 50 | 47 | 1500.00 | 70500.00 |
| 3. | 51 ರಿಂದ 75 | 14 | 2000.00 | 28000.00 |
| 4. | 76 ರಿಂದ 100 | 7 | 2500.00 | 17500.00 |
| 5. | 101 ರಿಂದ 125 | 4 | 3000.00 | 12000.00 |
| ಒಟ್ಟು | | 89 | | 1,45,000.00 |

ಸಾದಿಲ್ವಾರು ಸಾಮಗ್ರಿಗಳ ಖರೀದಿಗೆ ಯಾವುದೇ ರೀತಿಯ ಆಕ್ಷೇಪಣೆಗಳಿಗೆ ಅವಕಾಶ ಕಲ್ಪಿಸದೆ ನಿಗಧಿತ ಹಾಗೂ ಅನುಮೋದಿತ ಮಿತಿಯೊಳಗೆ ಶಿಶುವಿಹಾರ ಶಾಲಾ/ಕಾಲೇಜು ಮುಖ್ಯಸ್ಥರು ಕಾರ್ಯನಿರ್ವಹಿಸಬೇಕಾಗಿರುವ ಹಿನ್ನೆಲೆಯಲ್ಲಿ ಶಾಲಾ/ಕಾಲೇಜು ಮುಖ್ಯಸ್ಥರು ಕಡ್ಡಾಯವಾಗಿ ಕೆಳಕಂಡ ಮಾರ್ಗ ಸೂಚಿಗಳನ್ನು ಅನುಸರಿಸಿ ಕ್ರಮವಹಿಸುವುದು.

1. ಸಾದಿಲ್ವಾರು ಸಾಮಗ್ರಿಗಳ ಖರೀದಿಗೆ ಹಂಚಿಕೆ ಮಾಡಿರುವ ಬಾಬ್ತನ್ನು ಶಿಶುವಿಹಾರದ ಖಾತೆಯಲ್ಲಿ ಹಾಗೂ ಶಾಲಾ/ಕಾಲೇಜಿನ ಜಂಟಿ ಖಾತೆಯಲ್ಲಿಯೇ ನಿರ್ವಹಿಸುವುದು.
2. ಶಿಶುವಿಹಾರಗಳಿಗೆ ಹಂಚಿಕೆ ಮಾಡಿರುವ ಸಾದಿಲ್ವಾರು ಸಾಮಗ್ರಿಗಳ ಖರೀದಿಯ ಬಾಬ್ತಿಗೆ ಶಿಶುವಿಹಾರದ ಆಯವ್ಯಯವನ್ನು ಸಿದ್ದಪಡಿಸಿ, ನಿರ್ವಹಿಸುವುದು.
3. ಖರೀದಿ ಮಾಡುವಾಗ ಪಾರದರ್ಶಕಖರೀದಿ ನಿಯಮ–ಕೆ.ಎಫ್.ಸಿ, ಕೆ.ಟಿ.ಸಿ, ಎಂ.ಸಿ.ಇ. ನಿಯಮಗಳನ್ನು ಅನುಸರಿಸಿ ಖರೀದಿ ಮಾಡುವುದು ಹಾಗೂ ಲೆಕ್ಕ ದಾಖಲೆಗಳನ್ನು ಕಡ್ಡಾಯವಾಗಿ ನಿರ್ವಹಿಸಬೇಕು. ನಿಯಮಾವಳಿಗಳ ಅರಿವಿಲ್ಲ ಎಂಬುದನ್ನುಒಪ್ಪಲಾಗುವುದಿಲ್ಲ.
4. ವೆಚ್ಚಗಳನ್ನು ಭರಿಸಿದ ಕೂಡಲೇ ನಿಯಮಾನುಸಾರ ಓಚರ್‌ಗಳನ್ನು ದೃಢೀಕರಿಸಿ, ಸಂರಕ್ಷಿಸಿ, ಆಡಿಟ್‌ಗೆ ಒದಗಿಸಬೇಕು. ಓಚರ್‌ಗಳಲ್ಲಿ ದಿನಾಂಕ, ಕ್ರಮ ಸಂಖ್ಯೆ, ಟಿನ್ ಸಂಖ್ಯೆ, ಪಾನ್ ಸಂಖ್ಯೆ, ಸಂಸ್ಥೆಯ ಹೆಸರು, ಸಹಿ ಇರಬೇಕು. ಹಿಂಭಾಗದಲ್ಲಿ ದೃಢೀಕರಣವನ್ನು ಕಡ್ಡಾಯವಾಗಿ ಮಾಡಬೇಕು. ಕೈ ಬರಹದ ವೋಚರುಗಳ ಬಳಕೆ ನಿಯಮಬಾಹಿರವಾಗಿರುತ್ತದೆ.
5. ಪ್ರತಿ ವೆಚ್ಚಕ್ಕೆ ಸಂಬಂಧಿಸಿದಂತೆ ವೋಚರ್ ನಿರ್ವಹಿಸಿ, ನಿಯಮಾನುಸಾರ ವೋಚರ್ ಸಂಖ್ಯೆ, ದಿನಾಂಕ ನಮೂದಿಸಿ Paid and Cancelled ಸೀಲ್ ಹಾಕಿ ದಾಖಲೆಇಟ್ಟಿರುವುದು.
6. ಎಲ್ಲಾ ವೆಚ್ಚಗಳಿಗೂ ನಿಯಮಾನುಸಾರ ವೋಚರ್‌ಗಳನ್ನು ನಿರ್ವಹಿಸುವುದು ಹಾಗೂ ಈ ವೋಚರ್‌ಗಳನ್ನು ಸಂಬಂಧಪಟ್ಟ ಶಿಕ್ಷಕರು/ಗುಮಾಸ್ತರು ಸ್ಟಾಕ್ ಪಡೆದ ಬಗ್ಗೆ ಹಾಗೂ ಬಳಸಿಕೊಂಡ ಬಗ್ಗೆ ಧೃಢೀಕರಿಸಿದ ನಂತರ ಮುಖ್ಯಸ್ಥರ ಮೇಲು ಸಹಿ ಮಾಡುವುದರೊಂದಿಗೆ ಧೃಢೀಕರಿಸಬೇಕು.
7. ಸದರಿ ಖರ್ಚು ವೆಚ್ಚಗಳನ್ನು ಪಾರದರ್ಶಕವಾಗಿಟ್ಟು ಕೊಂಡು ಎಲ್ಲಾ ಲೆಕ್ಕ ಪತ್ರಗಳನ್ನು KFC ಕರ್ನಾಟಕ ಆರ್ಥಿಕ ಸಂಹಿತೆಗನುಗುಣವಾಗಿ ನಿರ್ವಹಿಸಿ, ಮುಖ್ಯ ಲೆಕ್ಕಾಧಿಕಾರಿ ಕಛೇರಿಯಿಂದ ನಡೆಯುವ ಆಡಿಟ್ ಹಾಗೂ ಇಲಾಖಾ ತಪಾಸಣಾ ಸಂದರ್ಭದಲ್ಲಿ ಒದಗಿಸುವುದು.
8. ಯಾವುದೇ ಮೊತ್ತವನ್ನು ಯಾವುದೇ ಕಾರಣದಿಂದ ಸೆಲ್ಫ್ ಚೆಕ್‌ನಲ್ಲಿ ಡ್ರಾ ಮಾಡಬಾರದು. ಸಂಬಂಧಿಸಿದ ಸರಬರಾಜುದಾರರಿಂದ ಖರೀದಿಗೆ ಸಂಬಂಧಿಸಿದಂತೆ ಬಿಲ್/ವೋಚರ್ ಪಡೆದುಚೆಕ್ ರೂಪದಲ್ಲಿ ಪಡೆದು ಪಾವತಿಸಬೇಕು.
9. ಹಣ ಪಾವತಿ ಸಂದರ್ಭದಲ್ಲಿ ಅನ್ವಯವಾಗುವದರದಲ್ಲಿ ಆದಾಯ ತೆರಿಗೆ/ಸೇವಾ ತೆರಿಗೆ ಮೊದಲಾದ ಬಾಬ್ತುಗಳನ್ನು ಕಡ್ಡಾಯವಾಗಿ ನಿಯಮಾನುಸಾರ ಕಟಾಯಿಸಿ, ಇಲಾಖೆಗೆ ಪಾವತಿಸುವುದು.
10. ಶಿಶುವಿಹಾರಗಳಿಗೆ ನೀಡಲಾಗಿರುವ ಸಾದಿಲ್ವಾರು ಸಾಮಾಗ್ರಿಗಳ ಖರೀದಿಯ ಬಾಬ್ತನ್ನು ಪಾಸ್ ಪುಸ್ತಕದ ಆಧಾರದ ಮೇಲೆ ನಗದು ಪುಸ್ತಕ ಹಾಗೂ ಲೆಡ್ಜರ್‌ನಲ್ಲಿ ದಾಖಲು ಮಾಡಬೇಕು. ಇದು ನಗದು ಪುಸ್ತಕ ಹಾಗೂ ಬ್ಯಾಂಕ್ ಪಾಸ್ ಪುಸ್ತಕಕ್ಕೆ ತಾಳೆ ಹೊಂದುವಂತಿರಬೇಕು.
11. ಯಾವ ಉದ್ದೇಶಕ್ಕಾಗಿ ಬಿಡುಗಡೆ ಮಾಡಲಾಗಿದೆಯೋ, ಅದೇ ಉದ್ದೇಶಕ್ಕಾಗಿ ಮಾತ್ರ ವೆಚ್ಚ ಮಾಡಬೇಕು. ಇತರೆ ಚಟುವಟಿಕೆಗಳಿಗೆ ಕಡ್ಡಾಯವಾಗಿ ಬಳಸಬಾರದು. ಒಂದು ವೇಳೆ ಬಿಡುಗಡೆಯಾದ ಮೊತ್ತವನ್ನು ಅದೇ ಸಾಲಿನಲ್ಲಿ ಪೂರ್ಣವಾಗಿ ವೆಚ್ಚವಾಗದೇ ಬಾಕಿ ಉಳಿದಲ್ಲಿ ಅಂತಹ ಮೊತ್ತವನ್ನು ಮೇಲಾಧಿಕಾರಿಗಳ ಪೂರ್ವಾನುಮತಿ ಇಲ್ಲದೆ ವೆಚ್ಚ ನಿರ್ವಹಿಸಬಾರದು.
12. ಎಲ್ಲಾ ಶಿಶುವಿಹಾರದ ಮುಖ್ಯಸ್ಥರುಗಳು ಈ ಬಗ್ಗೆ ಎಚ್ಚರಿಕೆ ವಹಿಸತಕ್ಕದ್ದು, ಇಲ್ಲದಿದ್ದಲ್ಲಿ ಉಂಟಾಗಬಹುದಾದ ಯಾವುದೇ ಲೋಪ ದೋಷಕ್ಕೆ ಸಂಬಂಧಿಸಿದ ಶಿಶುವಿಹಾರದ ಮುಖ್ಯಸ್ಥರುಗಳೇ ಜವಾಬ್ದಾರರಾಗುತ್ತಾರೆ.
13. ಶಿಶುವಿಹಾರದ ಪ್ರಕಟಣಾ ಫಲಕದಲ್ಲಿ ಪ್ರತಿ ಸಾಲಿನಲ್ಲಿ ಸಾದಿಲ್ವಾರು ಸಾಮಗ್ರಿಗಳ ಖರೀದಿಗೆ ಸಂಬಂಧಿಸಿದಂತೆ ಬಿಡುಗಡೆ ಆಗಿರುವ ಬಾಬ್ತು ಮತ್ತು ವೆಚ್ಚಗಳ ಬಗ್ಗೆ ಕಾಲಕಾಲಕ್ಕೆ ಮಾಹಿತಿಯನ್ನು ಕಡ್ಡಾಯವಾಗಿ ಪ್ರಕಟಿಸುವುದು.
14. ಸದರಿ ಬಾಬ್ತಿನ ವೆಚ್ಚಗಳ ಪ್ರಗತಿಯ ವರದಿಯನ್ನು ವಿದ್ಯಾಧಿಕಾರಿರವರ ಕಛೇರಿಗೆ ಕಡ್ಡಾಯವಾಗಿ ಸಲ್ಲಿಸಬೇಕು.
15. ಲೆಕ್ಕ ಪತ್ರ ನಿರ್ವಹಣೆ ವಿಷಯದಲ್ಲಿ ಸಂದೇಹ ಮತ್ತು ಸಮಸ್ಯೆಗಳಿದ್ದಲ್ಲಿ ವಿದ್ಯಾಧಿಕಾರಿರವರನ್ನು ಸಂಪರ್ಕಿಸಿ ಸಂದೇಹ ಮತ್ತು ಸಮಸ್ಯೆಗಳನ್ನು ಪರಿಹಾರ ಮಾಡಿಕೊಳ್ಳುವುದು.

16. ಕಛೇರಿಯಿಂದ ನೀಡಿರುವ ಹಾಗೂ ನೀಡಲಾಗುವ ಸೂಚನೆಗಳಿಗೆ ಅನುಸಾರವಾಗಿಯೇ ವೆಚ್ಚ ಮಾಡಬೇಕು. ಮಾರ್ಗಸೂಚಿಗೆ ವಿರುದ್ದವಾಗಿ ಮಾಡಿದ ವೆಚ್ಚಗಳಿಗೆ ಶಿಶುವಿಹಾರದ ಮುಖ್ಯಸ್ಥರೇ ಜವಾಬ್ದಾರರಾಗಿರುತ್ತಾರೆ. ನಿಯಮ ಉಲ್ಲಂಘನೆ ಮಾಡಿದ್ದಲ್ಲಿ ಶಿಸ್ತು ಕ್ರಮಕ್ಕೆಗುರಿಪಡಿಸಲಾಗುವುದು.

ಶಿಶುವಿಹಾರದ ಮುಖ್ಯಸ್ಥರು ಹಾಗೂ ಶಾಲಾ/ಕಾಲೇಜು ಮುಖ್ಯಸ್ಥರು ನಿಯಮಾನುಸಾರಕೆ.ಟಿ.ಪಿ.ಪಿ ಹಾಗೂ ಕೆ.ಎಫ್.ಸಿ., ಎಂ.ಸಿ.ಇ.ನಿಯಮಾವಳಿಗಳನ್ನು ಪಾಲಿಸುವುದು ಹಾಗೂ ಯಾವುದೇ ಲೋಪದೋಷಕ್ಕೆ, ಸಂಬಂಧಪಟ್ಟ ಶಿಶು ವಿಹಾರದ ಮುಖ್ಯಸ್ಥರು ಹಾಗೂ ಶಾಲಾ/ಕಾಲೇಜು ಮುಖ್ಯಸ್ಥರು ಜವಾಬ್ದಾರರಾಗಿರುತ್ತಾರೆ. ಆಯಾ ಶಿಶುವಿಹಾರಗಳಿಗೆ ಹಂಚಿಕೆ ಮಾಡಿರುವ ಸಾದಿಲ್ವಾರು ಖರೀದಿಯ ವೆಚ್ಚದ ಮೊತ್ತವನ್ನು ಶಿಶುವಿಹಾರದ ಮುಖ್ಯಸ್ಥರು ಹಾಗೂ ಶಾಲಾ/ಕಾಲೇಜುಗಳ ಖಾತೆಗೆ ಆರ್.ಟಿ.ಜಿ.ಎಸ್. ಮೂಲಕ ನೇರವಾಗಿ ನೀಡಲು ಹಾಗೂ ಸಾದಿಲ್ವಾರು ಸಾಮಾಗ್ರಿಗಳ ಖರೀದಿಯ ವೆಚ್ಚಕ್ಕೆ ತಗಲುವ ಅಂದಾಜು ಮೊತ್ತ ***ರೂ.1,45,000/–***ಗಳನ್ನು 2015–16ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ 25 ಸಾಮಾನ್ಯ ವೆಚ್ಚಗಳು ಶಿಶು ವಿಹಾರಗಳ ಸಾದಿಲ್ವಾರುಗಳು ಕ0081ರಲ್ಲಿನ ***ರೂ.5.00*** ಲಕ್ಷಗಳ ಅನುದಾನದಲ್ಲಿ ಭರಿಸಲು ಮತ್ತು ಸದರಿ ಲೆಕ್ಕ ಶೀರ್ಷಿಕೆಯಲ್ಲಿ ಉಳಿಕೆಯಾಗುವ ***ರೂ.3,55,500.00***ಗಳನ್ನು ಶಿಶುವಿಹಾರದ ಸಣ್ಣಪುಟ್ಟ ದುರಸ್ಥಿಗಾಗಿ ಪುನರ್ ವಿನಿಯೋಗಿಸಿಕೊಳ್ಳಲು ಅನುಮೋದನೆಗಾಗಿ ಮಾನ್ಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಲಾದ **ಮಾನ್ಯ ವಿಶೇಷ ಆಯುಕ್ತರು (ಕಲ್ಯಾಣ) ರವರ ಪತ್ರದ ಸಂಖ್ಯೆ; ವಿದ್ಯಾ(1)ಪಿಆರ್:–/15–16, ದಿನಾಂಕ: 04.03.2016ರ ಟಿಪ್ಪಣಿಯನ್ನು ಸಭೆಯಲ್ಲಿ ಚರ್ಚಿಸಿ ಒಪ್ಪಿ ತೀರ್ಮಾನಿಸಿರುವ ಶಿಕ್ಷಣ ಸ್ಥಾಯಿ ಸಮಿತಿಯ ದಿನಾಂಕ: 24.03.2016 ರ ಸಭೆಯ ನಿರ್ಣಯ.**

**ನಿರ್ಣಯ: ವಿಶೇಷ ಆಯುಕ್ತರು (ಕಲ್ಯಾಣ) ರವರ ದಿನಾಂಕ: 04.03.2016ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

## *13]. ವಿಷಯದ ಸಂಖ್ಯೆಃ ತೆಆಸ್ಥಾಸ/02/2016–17*

ವಿಶೇಷ ಆಯುಕ್ತರು (ಕಲ್ಯಾಣ) ರವರ ಟಿಪ್ಪಣಿ ದಿನಾಂಕ: 09.03.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮಾರುತಿ ಮಂದಿರ, ವಿನಾಯಕ ಲೇಔಟ್, 1ನೇ ಮುಖ್ಯರಸ್ತೆ, ವಾರ್ಡ್ ನಂ–126ರಲ್ಲಿ ಬಡ ಕುಟುಂಬಗಳು ಹಾಗೂ ವಲಸೆ ಬಂದಿರುವ ಕೂಲಿ ಕಾರ್ಮಿಕರು ವಾಸಿಸುತ್ತಿದ್ದು, ಬಡ ಮಕ್ಕಳು ವಿದ್ಯಾಭ್ಯಾಸದಿಂದ ವಂಚಿತರಾಗುತ್ತಿರುವುದು ಹಾಗೂ ಮಕ್ಕಳು ಮಧ್ಯದಲ್ಲಿಯೇ ಶಾಲೆ ಬಿಟ್ಟಿರುವುದು ಕಂಡುಬಂದಿದ್ದು, ಈ ವಾರ್ಡ್‌ನಲ್ಲಿ ಸರ್ಕಾರಿ ಅನುದಾನಿತ ಬಿ.ಬಿ.ಎಂ.ಪಿ. ಶಾಲೆಗಳು ಇಲ್ಲದೇ ಇರುವುದರಿಂದ ಮಕ್ಕಳ ಹಿತದೃಷ್ಟಿಯಿಂದ ಪಾಲಿಕೆಯ ಹಿರಿಯ ಪ್ರಾಥಮಿಕ ಶಾಲೆಯನ್ನು 2016–17ನೇ ಸಾಲಿನ ಶೈಕ್ಷಣಿಕ ಸಾಲಿನಿಂದ ಪ್ರಾರಂಭಿಸಲು ಸದರಿ ವಾರ್ಡ್‌ನ ಮಾನ್ಯ ಸದಸ್ಯರು ಬಿ.ಬಿ.ಎಂ.ಪಿ. ಮಾರುತಿಮಂದಿರ ವಾರ್ಡ್ ನಂ–126ರ ಮಾಜಿ ಮಹಾಪೌರರು ರವರು ಮನವಿ ಸಲ್ಲಿಸಿರುತ್ತಾರೆ.

ಸದರಿ ಶಾಲೆಯನ್ನು ಪ್ರಾರಂಭಿಸಲು ಅಂದಾಜು ಭೋದಕ/ಭೋದಕೇತರ ಸಿಬ್ಬಂದಿಗಳ ಅವಶ್ಯಕವಿದ್ದು ಒಟ್ಟಾರೆ ಅಂದಾಜು ಬಾಬ್ತಿನ ವಿವರ ಈ ಕೆಳಕಂಡಂತಿರುತ್ತದೆ.

**ಭೋದಕ/ಭೋದಕೇತರ ಸಿಬ್ಬಂದಿಗಳ ವಿವರ**

| ಕ್ರಮ ಸಂಖ್ಯೆ | ವಿವರ | ಸಂಖ್ಯೆ | ವೇತನಶ್ರೇಣಿ | ಒಟ್ಟಾರೆ ವೇತನದ ವೆಚ್ಚ | | | | | |
|---|---|---|---|---|---|---|---|---|---|
| | | | | **BASIC PAY** | **DA 32.5%** | **HRA 30%** | **CCA** | **MA** | **ಅಂದಾಜು ವೆಚ್ಚ** |
| 01 | ಮುಖ್ಯೋಪಾಧ್ಯಾಯರು | 01 | 16000–29600 | 16000 *12 | 5200*12 | 4800*12 | 350*12 | 100*12 | |
| | **ಒಟ್ಟು** | | | **1,92,000-00** | **62,400-00** | **57,600-00** | **4200-00** | **1200-00** | 3,17,400–00 |
| 02 | ಸಹ ಶಿಕ್ಷಕರು | 05 | 12500–24000 | 12500* 12 | 4063*12 | 3750*12 | 350*12 | 100*12 | |
| | **ಒಟ್ಟು** | | | **1,50,000-00** | **48756-00** | **45000-00** | **4200-00** | **1200-00** | 2,49,156–00 |
| 03 | ದೈಹಿಕ ಶಿಕ್ಷಕರು | 01 | 12500–24000 | 12500* 12 | 4063*12 | 3750*12 | 350*12 | 100*12 | |
| | **ಒಟ್ಟು** | | | **1,50,000-00** | **48756-00** | **45000-00** | **4200-00** | **1200-00** | 2,49,156–00 |
| 04 | ಜವಾನ | 01 | 10400–16400 | 10400* 12 | 3380*12 | 3120*12 | 350* 12 | 100*12 | |
| | **ಒಟ್ಟು** | | | **1,24,800-00** | **40,560-00** | **37440-00** | **4200-00** | **1200-00** | 2,08,200–00 |

| | | | | | | | | | |
|---|---|---|---|---|---|---|---|---|---|
| 05 | ಪೌರಕಾರ್ಮಿಕರು | 01 | 9600–10400 | 9600*12 | 3120*12 | 2880*12 | 350*12 | 100*12 | |
| | ಒಟ್ಟು | | | **115200-00** | **37440-00** | **34560-00** | **4200-00** | **1200-00** | 192600–00 |
| | ಅಂದಾಜು ಒಟ್ಟಾರೆ ಮೊತ್ತ | | | | | | | | 13,17,888–00 |

ಸದರಿ ವಾರ್ಡ್‌ನಲ್ಲಿ ಪ್ರಾಥಮಿಕ ಶಾಲೆ ಪ್ರಾರಂಭಿಸಲು ಖಾಯಂ ಭೋದಕ/ಭೋದಕೇತರ ವಾರ್ಷಿಕ ವೇತನದ ಒಟ್ಟು ಅಂದಾಜು ರೂ.13,17,888–00ಗಳು ಅವಶ್ಯಕವಿರುತ್ತದೆ ಹಾಗೂ ಈ ವಾರ್ಡ್‌ನಲ್ಲಿ ಪಾಲಿಕೆಯ ಸ್ವಂತ ಕಟ್ಟಡವಿರುವುದರಿಂದ ಶಾಲೆ ನಡೆಸಲು ಯಾವುದೇ ತೊಂದರೆ ಇರುವುದಿಲ್ಲವೆಂದು ಸದರಿ ಕಟ್ಟಡದಲ್ಲಿ ಶಾಲೆಗೆ ಸುಸಜ್ಜಿತವಾದ ಕಟ್ಟಡವಿದ್ದು, ಮೂಲಭೂತ ಸೌಕರ್ಯಗಳಾದ ವಿದ್ಯುಚ್ಛಕ್ತಿ, ಶೌಚಾಲಯದ ಹಾಗೂ ನೀರಿನ ವ್ಯವಸ್ಥೆಯು ಉತ್ತಮವಾಗಿರುವುದಾಗಿ ವಿಷಯ ಪರಿವೀಕ್ಷಕರು ನೀಡಿರುವ ವರದಿಯಂತೆ ಬಡ ವಿದ್ಯಾರ್ಥಿಗಳ ವಿದ್ಯಾಭ್ಯಾಸದ ದೃಷ್ಟಿಯಿಂದ 2016–17ನೇ ಸಾಲಿನ ಶೈಕ್ಷಣಿಕ ಸಾಲಿನಲ್ಲಿ ಹಿರಿಯ ಪ್ರಾಥಮಿಕ ಶಾಲೆಯನ್ನು ಸದರಿ ವಾರ್ಡ್‌ನಲ್ಲಿ ಪ್ರಾರಂಭಿಸಲು ಮಾನ್ಯ ಶಿಕ್ಷಣ ಸ್ಥಾಯಿ ಸಮಿತಿರವರ ಅನುಮೋದನೆ ನಂತರ ಮಾನ್ಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿರವರ ಅನುಮೋದನೆಗಾಗಿ ಮಂಡಿಸಿರುವ **ಮಾನ್ಯ ವಿಶೇಷ ಆಯುಕ್ತರು(ಕಲ್ಯಾಣ)ರವರ ಟಿಪ್ಪಣಿ/ಪತ್ರದ ಸಂಖ್ಯೆ; ವಿದ್ಯಾ(1)ಪಿಆರ್:–/15–16, ದಿನಾಂಕ:09.03.2016ರ ಟಿಪ್ಪಣಿಯನ್ನು ಸಭೆಯಲ್ಲಿ ಚರ್ಚಿಸಿ ಒಪ್ಪಲು ತೀರ್ಮಾನಿಸಿರುವ ಶಿಕ್ಷಣ ಸ್ಥಾಯಿ ಸಮಿತಿಯ ದಿನಾಂಕ: 24.03.2016ರ ಸಭೆಯ ನಿರ್ಣಯ.**

**ನಿರ್ಣಯ: ವಿಶೇಷ ಆಯುಕ್ತರು (ಕಲ್ಯಾಣ) ರವರ ದಿನಾಂಕ: 09.03.2016ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

***14]. ವಿಷಯದ ಸಂಖ್ಯೆ: ತೆಆಸ್ಥಾಸ/03/2016–17***

ಆಯುಕ್ತರ ದಿನಾಂಕ: 29.03.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಶ್ರೀ.ಪಿ.ಎನ್.ಪಾಪಣ್ಣ, ಅಧ್ಯಕ್ಷರು, ಶ್ರೀ ಗಂಗಾಪರಮೇಶ್ವರಿ ದೇವಸ್ಥಾನ ದತ್ತಿ(ನೋ), ಗಂಗಮ್ಮ ವೃತ್ತ, ಬಿಬಿಎಂಪಿ ರಸ್ತೆ, ಯಲಹಂಕ, ಬೆಂಗಳೂರು–64 ರವರು ಪೂಜ್ಯ ಮಹಾಪೌರರಿಗೆ ಮನವಿ ಸಲ್ಲಿಸಿ ಯಲಹಂಕ ಉಪ ವಿಭಾಗದ ವ್ಯಾಪ್ತಿಯಲ್ಲಿ ಬರುವ ಯಲಹಂಕ ಕೆರೆಯ ವಿಸ್ತೀರ್ಣ ಸುಮಾರು 300 ಎಕರೆ ಇರುತ್ತದೆ. ಯಲಹಂಕ ಕೆರೆಯು ಕಳೆದ 15 ವರ್ಷಗಳಿಂದ ಮಳೆ ನೀರು ತುಂಬಿ ಕೋಡಿ ಹರಿದಿರುವುದಿಲ್ಲ ಆದರೆ ಇತ್ತೀಚಿಗೆ ಬಿದ್ದ ಭಾರಿ ಮಳೆಯಿಂದಾಗಿ ಕೆರೆಯು ತುಂಬಿ ದಿ:12–11–2015 ರಂದು ಕೋಡಿಯಿಂದ ನೀರು ಹರಿಯುತ್ತಿದ್ದು ಶ್ರೀ ಗಂಗಾಪರಮೇಶ್ವರಿ ದೇವಾಸ್ಥಾನ ದತ್ತಿ(ರಿ), ಗಂಗಮ್ಮ ವೃತ್ತ ಬಿಬಿಎಂಪಿ ರಸ್ತೆ, ಯಲಹಂಕ ಬೆಂಗಳೂರು ರವರು ಯಲಹಂಕ ಕೆರೆ ತುಂಬಿ ಕೋಡಿ ಹರಿಯುತ್ತಿರುವುದರಿಂದ ಯಲಹಂಕ ಗ್ರಾಮದ ಗ್ರಾಮಸ್ಥರು ದಿ:24–11–2015 ರಂದು ಗಂಗಮ್ಮ ಜಾತ್ರೆಯನ್ನು ಆಚರಿಸಲು ಉದ್ದೇಶಿಸಿರುತ್ತಾರೆ ಸದರಿ ಕಾರ್ಯಕ್ರಮಕ್ಕೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ರೂ.5.00 ಲಕ್ಷಗಳ ಅನುದಾನ ಮಂಜೂರು ಮಾಡಲು ಕೋರಿರುತ್ತಾರೆ. ಆರ್.ಪದ್ಮಾವತಿ ಅಮರನಾಥ್, ಬಿಬಿಎಂಪಿ ಸದಸ್ಯರು, ವಾರ್ಡ್ ನಂ–02 ರವರು ಶಿಫಾರಸ್ಸು ಮಾಡಿರುತ್ತಾರೆ.

ಪಾಲಿಕೆಯ ಸಭೆಯ ವಿಷಯ ಸಂಖ್ಯೆ:459/2014–15 ದಿನಾಂಕ:20–03–2015 ರಂದು ಅನುಮೋದಿಸಿ, ತಿದ್ದುಪಡಿ ಮಾಡಿ ತೀರ್ಮಾನಿಸಿರುವಂತೆ, ಮಾನ್ಯ ಆಡಳಿತಗಾರರ ಅನುಮೋದನೆ ನಡುವಳಿ ವಿಷಯ ಸಂಖ್ಯೆ, 61/2015–16 ದಿ:15–05–2015 ಹಾಗೂ ಸರ್ಕಾರದ ಆದೇಶ ಸಂಖ್ಯೆ ನಇ/608/ ಎಂಎನ್‌ವೈ 2015 ದಿ:29–05–2015ರ ರೀತ್ಯಾ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2015–16ನೇ ಸಾಲಿನ ಆಯವ್ಯಯದಲ್ಲಿ ಕೊಡುಗೆ ಮತ್ತು ಸಹಾಯಧನ ಲೆಕ್ಕಶೀರ್ಷಿಕೆಯಡಿ ರೂ. 50.00 ಲಕ್ಷಗಳನ್ನು ಮೀಸಲಿರಿಸಲಾಗಿರುತ್ತದೆ.

ಶ್ರೀ ಗಂಗಾಪರಮೇಶ್ವರಿ ದೇವಸ್ಥಾನ ದತ್ತಿ(ನೋ) ರವರಿಗೆ ವಿಶೇಷ ಆಯುಕ್ತರು(ಹಣಕಾಸು) ರವರು ರೂ.01.00 ಲಕ್ಷಗಳ ಅನುದಾನ ಮಂಜೂರು ಮಾಡಲು ಆದೇಶಿಸಿರುವುದರಿಂದ ಶ್ರೀ ಗಂಗಾಪರಮೇಶ್ವರಿ ದೇವಸ್ಥಾನ ದತ್ತಿ(ನೋ) ರವರಿಗೆ ರೂ.01.00 ಲಕ್ಷಗಳ ಅನುದಾನ ನೀಡುವ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಸದರಿ ಸಂಸ್ಥೆಗೆ ರೂ.4.00 ಲಕ್ಷಗಳ (ರೂ.ನಾಲ್ಕು ಲಕ್ಷ ಮಾತ್ರ) ಅನುದಾನವನ್ನು ಮಂಜೂರು ಮಾಡುವುದೆಂದು ಸಮಿತಿಯು ತೀರ್ಮಾನಿಸಿತು.**

## *15]. ವಿಷಯದ ಸಂಖ್ಯೆ: ತೆಆಸ್ಥಾಸ/04/2016-17*

ಆಯುಕ್ತರ ಟಿಪ್ಪಣಿ ದಿನಾಂಕ: 02.04.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ತೋಟಗಾರಿಕೆ ಸ್ಥಾಯಿ ಸಮಿತಿಯ ಸಭೆಯಲ್ಲಿ ತೆಗೆದುಕೊಂಡಿರುವ ವಿಷಯ ಸಂಖ್ಯೆ: ತೋಸ್ಥಾಸ/21/2015-16, ದಿನಾಂಕ: 08.01.2016ರ ನಿರ್ಣಯದಲ್ಲಿ, ದಿನಾಂಕ: 01.12.2015 ರಿಂದ 31.05.2016ರವರೆಗೆ ಉದ್ಯಾನವನಗಳ ನಿರ್ವಹಣೆಯನ್ನು ಹಾಲಿ ನಿರ್ವಹಣೆ ಮಾಡುತ್ತಿರುವ ಗುತ್ತಿಗೆದಾರರಿಂದಲೇ ಮುಂದುವರೆಸುವಂತೆ ಸಮಿತಿಯು ತೀರ್ಮಾನಿಸಿ ಹಾಗೂ 2015-16ನೇ ಸಾಲಿನ ಆಯವ್ಯಯದ ಲೆಕ್ಕಶೀರ್ಷಿಕೆ ಪಿ-0088 ರಲ್ಲಿರುವ ರೂ.3,000.00 ಲಕ್ಷಗಳ ಅನುದಾನವನ್ನು ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಉದ್ಯಾನವನಗಳಿಗೆ ಸಂಬಂಧಪಟ್ಟ ಬಾಕಿಯಿರುವ ಡಿ.ಸಿ.ಬಿಲ್ಲುಗಳನ್ನು ಹಂತಹಂತವಾಗಿ ಪಾಲಿಕೆಯ ನಿಯಮಾನುಸಾರ ಹಣ ಬಿಡುಗಡೆ ಮಾಡಿ, ಮರು ಹೊಂದಾಣಿಕೆ ಮಾಡಿಕೊಂಡಿರುವ ಸದರಿ ರೂ.3,000.00 ಲಕ್ಷಗಳ ಅನುದಾನವನ್ನು 2016-17ನೇ ಸಾಲಿನ ಆಯವ್ಯಯದಲ್ಲಿ ಮುಂದುವರೆದ ಕಾಮಗಾರಿಗಳ ಅನುದಾನದ ಅಡಿಯಲ್ಲಿ ಕಾದಿರಿಸಿಕೊಳ್ಳುವಂತೆ ಸಮಿತಿಯು ಸರ್ವಾನುಮತದಿಂದ ತೀರ್ಮಾನಿಸಿದೆ.

ಮುಂದುವರೆದಂತೆ, ಲೆಕ್ಕಶೀರ್ಷಿಕೆ ಪಿ-0088 ಅಡಿಯಲ್ಲಿ ಕೈಗೊಂಡ ಉದ್ಯಾನವನಗಳ ನಿರ್ವಹಣೆ ಮತ್ತು ಅಭಿವೃದ್ಧಿ ಕಾಮಗಾರಿಗಳ ಬಾಕಿ ಬಿಲ್ಲುಗಳನ್ನು ಪಾವತಿಸಲು 2015-16ನೇ ಸಾಲಿನ ಲೆಕ್ಕಶೀರ್ಷಿಕೆ ಪಿ-0088 ಅಡಿ ಲಭ್ಯವಿರುವ ರೂ.30.00 ಕೋಟಿ ಅನುದಾನದಲ್ಲಿ ರೂ.14.00ಕೋಟಿಗಳನ್ನು ಮರುಹೊಂದಾಣಿಕೆ ಮಾಡುವ ಸಲುವಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಮುಂದೆ ಮಂಡಿಸಲಾದ ಟಿಪ್ಪಣಿ.

**-ಮುಂದೂಡಿದೆ-**

## *16]. ವಿಷಯದ ಸಂಖ್ಯೆ: ತೆಆಸ್ಥಾಸ/05/2016-17*

ಆಯುಕ್ತರ ದಿನಾಂಕ: 07.04.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಕರ್ನಾಟಕ ವಿಧಾನಸಭೆ/ವಿಧಾನ ಪರಿಷತ್ತಿನ ಅಧಿವೇಶನಗಳು ನಡೆಯುವ ಸಂದರ್ಭದಲ್ಲಿ ಆಯುಕ್ತರ ಆಪ್ತ ಶಾಖೆ, ಅಪರ ಆಯುಕ್ತರು (ಆಡಳಿತ) ರವರ ಆಪ್ತ ಶಾಖೆ ಹಾಗೂ ಆಯುಕ್ತರ ಕಛೇರಿ ಆಡಳಿತ ಶಾಖೆಯ ಅಧಿಕಾರಿ/ನೌಕರರು ಕಛೇರಿ ಅವಧಿ ಮುಗಿದ ನಂತರವೂ ಕಾರ್ಯನಿರ್ವಹಿಸುತ್ತಿರುತ್ತಾರೆ ಹಾಗೂ ವಿಧಾನಸಭೆ /ವಿಧಾನ ಪರಿಷತ್ತಿಗೆ ಉತ್ತರಿಸಬೇಕಾದ ಪ್ರಶ್ನೆಗಳಿಗೆ ಸಂಬಂಧಪಟ್ಟ ಪಾಲಿಕೆಯ ಎಲ್ಲಾ ಕಛೇರಿಗಳಿಂದ ಉತ್ತರ ಪಡೆದು ಕ್ರೋಢೀಕರಿಸಿ ಒದಗಿಸುವ ನಿಟ್ಟಿನಲ್ಲಿ ತಾವು ಹಾಲಿ ನಿರ್ವಹಿಸುತ್ತಿರುವ ಕೆಲಸಕಾರ್ಯಗಳ ಜೊತೆಗೆ ಹೆಚ್ಚಿನ ಅವಧಿಯಲ್ಲಿ ಹಾಗೂ ಕಛೇರಿ ಅವಧಿ ಮುಗಿದ ನಂತರವೂ ಕಾರ್ಯನಿರ್ವಹಿಸುತ್ತಿರುವ ಹಿನ್ನಲೆಯಲ್ಲಿ ಅವರುಗಳಿಗೆ ಪ್ರತಿ ಕರ್ನಾಟಕ ವಿಧಾನಸಭೆ/ವಿಧಾನ ಪರಿಷತ್ತಿನ ಅಧಿವೇಶನ ನಡೆಯುವ ಅವಧಿಯ ದಿನಗಳಿಗೆ ಗೌರವ ಧನ ನಿಗಧಿಗೆ ಸಂಬಂಧಿಸಿದ ಸರ್ಕಾರದ ವಿಧಾನಸಭೆಯ ಸಚಿವಾಲಯದಿಂದ ಆಗಿಂದಾಗ್ಗೆ ಹೊರಡಿಸಲಾಗುತ್ತಿರುವ ಆದೇಶಗಳನ್ವಯ ಪಾಲಿಕೆಯಲ್ಲಿ ಅಧಿವೇಶನದ ಸಂದರ್ಭದಲ್ಲಿ ಕಾರ್ಯನಿರ್ವಹಿಸಿರುವ ಅಧಿಕಾರಿ ಸಿಬ್ಬಂದಿಗಳಿಗೆ ಗೌರವಧನ ನಿಗಧಿಪಡಿಸಿ ಮಂಜೂರು ಮಾಡಲಾಗಿರುತ್ತದೆ. ಪ್ರಸ್ತುತ 2014-15ನೇ ಲೆಕ್ಕ ಪರಿಶೋಧನಾ ಸಂದರ್ಭದಲ್ಲಿ ಆಕ್ಷೇಪಣೆಗಳನ್ನು ವ್ಯಕ್ತಪಡಿಸುತ್ತಾ, ಇನ್ನು ಮುಂದೆ ಸದರಿ ಸಚಿವಾಲಯದ ಆದೇಶವನ್ನು ಪಾಲಿಕೆಯ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿ ಘಟನೋತ್ತರ ಅನುಮೋದನೆ ಪಡೆದು ಗೌರವಧನ ಮಂಜೂರಾತಿಗೆ ಕ್ರಮವಹಿಸಬಹುದಾಗಿರುತ್ತದೆಂದು ಅಭಿಪ್ರಾಯಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ, ಈ ಹಿಂದಿನ ಅಧಿವೇಶನದ ಸಂದರ್ಭದಲ್ಲಿ ಕಾರ್ಯನಿರ್ವಹಿಸಿರುವ ಅಧಿಕಾರಿ/ಸಿಬ್ಬಂದಿಗಳ ಪಾವತಿಸಿರುವ ಗೌರವಧನ ಮಂಜೂರಾತಿಗೆ ಘಟನೋತ್ತರ ಅನುಮೋದನೆ ನೀಡುವ ಸಂಬಂಧ ಹಾಗೂ ಮುಂಬರುವ ಅಧಿವೇಶನದ ಸಂದರ್ಭದಲ್ಲಿ ಕಾರ್ಯನಿರ್ವಹಿಸಲಿರುವ ಆಯುಕ್ತರ ಆಪ್ತ ಶಾಖೆ, ಅಪರ ಆಯುಕ್ತರು (ಆಡಳಿತ) ರವರ ಆಪ್ತ ಶಾಖೆ ಹಾಗೂ ಆಯುಕ್ತರ ಕಛೇರಿ ಆಡಳಿತ ಶಾಖೆಯ ಅಧಿಕಾರಿ/ಸಿಬ್ಬಂದಿಗೆ ಗೌರವಧನ ಮಂಜೂರಾತಿಗೆ ಸಂಬಂಧಿಸಿದಂತೆ ಸಚಿವಾಲಯದ ಆದೇಶ ಸಂಖ್ಯೆ:ಕವಿಸಸ/ಆ-3/117/ಗೌಧಹೆ/2013, ದಿನಾಂಕ:13-09-2013ರ ರಲ್ಲಿ ತಿಳಿಸಿರುವ ದರಗಳನ್ವಯ ಗೌರವಧನವನ್ನು ಪಾವತಿಸುವ ಬಗ್ಗೆ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಟಿಪ್ಪಣಿ.

**-ಮುಂದೂಡಿದೆ-**

## ***17]. ವಿಷಯದ ಸಂಖ್ಯೆ: ತೆಆಸ್ಥಾಸ/08/2016-17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 30.03.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಗಾಂಧಿನಗರ ವಿಭಾಗದ ವಾರ್ಡ್ ಸಂಖ್ಯೆ-94ರ ವ್ಯಾಪ್ತಿಗೆ ಒಳಪಡುವ ಗುಬ್ಬಿ ವೀರಣ್ಣ ರಂಗ ಮಂದಿರವನ್ನು ಈ ಹಿಂದೆ ಕರ್ನಾಟಕ ಕಲಾ ವೈಭವ ಸಂಘಕ್ಕೆ ನಾಟಕ ಪ್ರದರ್ಶಿಸುವ ಸಲುವಾಗಿ ಮಹಿಳಾ ರಂಗ ಸಂಘಟಕಿ ಮತ್ತು ಹಿಂದುಳಿದ ವರ್ಗದ ಮಹಿಳೆಯಾದ ಶ್ರೀಮತಿ. ಮಾಲತಿ ಸುಧೀರ್ ರವರಿಗೆ ಮಾಹೆಯಾನ ರೂ.61,500/-ರಂತೆ ಬಾಡಿಗೆ ನೀಡಲಾಗಿತ್ತು.

ಮುಂದುವರೆದಂತೆ, ಸದರಿ ಕಲಾ ಮಂದಿರವನ್ನು ನವೀಕರಿಸಿ, ಛಾವಣಿ ಮತ್ತು ಆಸನಗಳನ್ನು ದುರಸ್ಥಿಗೊಳಿಸಿ ಸದರಿ ರಂಗ ಮಂದಿರವನ್ನು ಮಾಸಿಕ ರೂ. 75,000/-ರಂತೆ ಹಾಗೂ ಎರಡು ತಿಂಗಳ ಬಾಡಿಗೆಯನ್ನು ಭದ್ರತಾ ಠೇವಣಿಯಾಗಿ ರೂ.1,50,000/-ಗಳನ್ನು ಪಡೆಯಲು ಪ್ರಸ್ತಾವನೆಯನ್ನು ಅನುಮೋದನೆಗಾಗಿ ಮೇಲಿನ ಅಧಿಕಾರಿಗಳಿಗೆ ಮಂಡಿಸಲಾಗಿತ್ತು.

ಈ ಮೇರೆಗೆ, ಸದರಿ ಕಡತವನ್ನು ಸಹಾಯಕ ಆಯುಕ್ತರು(ಆಸ್ತಿಗಳು), ಬಿ.ಬಿ.ಎಂ.ಪಿ ರವರಿಗೆ ಸಲ್ಲಿಸಲಾಗಿದ್ದು, ಈ ಕುರಿತಂತೆ ಸಹಾಯಕ ಆಯುಕ್ತರು(ಆಸ್ತಿಗಳು)ರವರು ಕಂಡಿಕೆ (56)ರಲ್ಲಿ ಸರ್ಕಾರಿ ಆದೇಶದಂತೆ ಸದರಿ ರಂಗ ಮಂದಿರವನ್ನು ಬಾಡಿಗೆ ನೀಡುವ ಬಗ್ಗೆ ಕ್ರಮ ಕೈಗೊಳ್ಳುವಂತೆ ಸಲಹೆಯನ್ನು ನೀಡಿರುತ್ತಾರೆ. ಈ ಕುರಿತು ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಮತ್ತು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಗಳ ನಿರ್ಣಯಕ್ಕಾಗಿ ಮಂಡಿಸಿರುವ **"ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 29-03-2016ರ ಸಂಖ್ಯೆ: ವಿ.ಆ(ಯೋ)/(ಜಿ) 12011/2015-16ರ ಟಿಪ್ಪಣಿಯನ್ನು ಪರಿಶೀಲಿಸಿ, ಗಾಂಧಿನಗರದಲ್ಲಿರುವ ಗುಬ್ಬಿ ವೀರಣ್ಣ ರಂಗ ಮಂದಿರವನ್ನು ಸರ್ಕಾರದ ಆದೇಶದಂತೆ ಬಾಡಿಗೆಗೆ ಅಥವಾ ಸಾರ್ವಜನಿಕ ಹರಾಜು ಮೂಲಕ ನೀಡಲು ತೀರ್ಮಾನಿಸಿರುವ, ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 26.04.2016ರ ಸಭೆಯ ನಿರ್ಣಯ."**

**ನಿರ್ಣಯ: ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 30.03.2016ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

## ***18]. ವಿಷಯದ ಸಂಖ್ಯೆ: ತೆಆಸ್ಥಾಸ/09/2016-17***

ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ: 11-03-2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ವಾರ್ಡ್ ಸಂಖ್ಯೆ: 139 ಹಳೆ ವಾರ್ಡ್ ಸಂಖ್ಯೆ: 30 ರ ಸ್ವತ್ತಿನ ಸಂಖ್ಯೆ: 8 ಭಕ್ಷಿಗಾರ್ಡನ್, ಪೌರಕಾರ್ಮಿಕ ವಸತಿಗೃಹವನ್ನು ಮಂಜುನಾಥ್ ಬಿನ್ ಲೇ॥ಫಕೀರಪ್ಪ ಮತ್ತು ವಿ.ಸೀನಾ ಬಿನ್ ಲೇ॥ವೆಂಕಟಪ್ಪ ರವರ ಹೆಸರಿಗೆ ಜಂಟಿಯಾಗಿ ಹಕ್ಕುಪತ್ರ ಹಂಚಿಕೆ ಮಾಡಲು ಕೋರಿದ್ದು, ಕಡತಗಳನ್ನು ಪರಿಶೀಲಿಸಲಾಗಿ, ಸದರಿ ಶ್ರೀಮತಿ.ಯಲ್ಲಿ ಯವರು 1990 ರಲ್ಲಿ ನಿವೃತ್ತಿ ಹೊಂದಿದ್ದು, (ಪಾಲಿಕೆಯ ಉಪ ಆಯುಕ್ತರು(ಆಡಳಿತ)ರವರ ಸುತ್ತೋಲೆ ಬಿ12(5ಜಿ)/ಪಿಆರ್/62/2003-04, ದಿ:05-07-2003 ರಲ್ಲಿ ಪಾಲಿಕೆಯ ವಸತಿಗೃಹಗಳನ್ನು ಕ್ರಯಕ್ಕೆ ನೀಡಲು ಪ್ರಸ್ತಾವನೆಯನ್ನು ಸಲ್ಲಿಸಬಾರದೆಂದು ಸುತ್ತೋಲೆಯನ್ನು ಹೊರಡಿಸಿರುತ್ತಾರೆ.) ಹಾಗೂ ಸರ್ಕಾರವು ದಿ:02-06-2003ರ ಆದೇಶದಲ್ಲಿ ಕ್ರಯ/ಗುತ್ತಿಗೆಯನ್ನು ಸಾರ್ವಜನಿಕ ಹರಾಜು ಮುಖಾಂತರ ಕ್ರಮವಿಡುವುದರ ಬಗ್ಗೆ ನಿರ್ದೇಶಿಸಿರುತ್ತಾರೆ. ಸರ್ಕಾರದ ಆದೇಶದ ಸಂಖ್ಯೆ: ನಅಇ 20 ಎಂಎನ್‌ಜಿ 99, ಬೆಂಗಳೂರು ದಿ:17-02-2004 ರಲ್ಲಿನ ಆದೇಶದ ಪತ್ರದಲ್ಲಿ ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿರುವವರಿಗೆ ಹಾಗೂ ಪೌರಕಾರ್ಮಿಕರಿಗೆ ಕಾಲಂ(6)ರಲ್ಲಿ ಸೂಚಿಸಿರುವ ದರಕ್ಕೆ ಹಂಚಿಕೆ ಮಾಡಿ ಹಕ್ಕುಪತ್ರ/ಕ್ರಯಪತ್ರಗಳನ್ನು ನೀಡಲು ಸರ್ಕಾರವು ಅನುಮೋದಿಸಿರುತ್ತದೆ. ಸರ್ಕಾರದ ಆದೇಶದಂತೆ ರೂ.2000/-ಗಳನ್ನು ದಿ:03-11-2004 ರಂದು ರಸೀತಿಯ ಸಂಖ್ಯೆ:932500 ರಲ್ಲಿ ಪಾವತಿಸಿರುತ್ತಾರೆ. ಕಡತದ ಪುಟ ಸಂಖ್ಯೆ:54ರಲ್ಲಿ ಕ್ರ.ಸಂ.8ರಲ್ಲಿ ಶ್ರೀಮತಿ.ಯಲ್ಲಿ ಪೌರಕಾರ್ಮಿಕಿ, ಬಿಲ್ಲೆ ಸಂಖ್ಯೆ:2420 ರವರ ಹೆಸರಿಗೆ 2004 ರಲ್ಲಿ ವಸತಿಗೃಹ ಸಂಖ್ಯೆ:8ನ್ನು ಮಂಜೂರು ಮಾಡಲಾಗಿದ್ದು, ಶ್ರೀಮತಿ.ಯಲ್ಲಿ ರವರು ಹಕ್ಕುಪತ್ರ ಪಡೆಯುವ ಮೊದಲೇ ಅಂದರೆ, ದಿನಾಂಕ: 01-10-2005 ರಂದು ಮರಣ ಹೊಂದಿರುತ್ತಾರೆ. ದಿ॥ಯಲ್ಲಿ ಯವರ ಪತಿಯಾದ ಶ್ರೀ ವೆಂಕಟಪ್ಪ ರವರು ಸಹ ಸುಮಾರು ವರ್ಷಗಳ ಹಿಂದೆಯೇ ಮರಣ ಹೊಂದಿರುತ್ತಾರೆಂದು ತಿಳಿಸಿರುತ್ತಾರೆ.

ಕಡತದ ಕಂಡಿಕೆ 18ರಲ್ಲಿ ಆಗಿನ ಸಹಾಯಕ ಕಂದಾಯ ಅಧಿಕಾರಿ(ಚಾಮರಾಜಪೇಟೆ)ರವರು ಕಂದಾಯ ಪರಿವೀಕ್ಷಕರು ರವರಿಗೆ ಸೂಕ್ತ ವರದಿಯೊಂದಿಗೆ ಕಡತವನ್ನು ಮಂಡಿಸಲು ಆದೇಶಿಸಿರುತ್ತಾರೆ ಮತ್ತು ಕಂಡಿಕೆ 32ರಲ್ಲಿ ಆಗಿನ ಕಂದಾಯ ಪರಿವೀಕ್ಷಕರು ವಾರ್ಡ್ 139 ರವರು ದಿ:08-08-2013 ರಂದು ಸ್ಥಳದ ಮಹಜರ್‌ನ್ನು ನಡೆಸಿ, ಕಡತದ ಪುಟ ಸಂಖ್ಯೆ:171 ರಲ್ಲಿ ಲಗತ್ತಿಸಿರುತ್ತಾರೆ ಮತ್ತು ಸ್ಥಳದ ಮಹಜರ್ ಪ್ರತಿಯಲ್ಲಿ ಸ.ಕಂ.ಅ(ಚಾ) ರವರ ಮತ್ತು ಮಹಜರ್ ನಡೆಸಿದ ಅಧಿಕಾರಿಯ ಸಹಿ ಮತ್ತು ಮೊಹರು ಇರುವುದಿಲ್ಲ.

ಮುಂದುವರೆದಂತೆ, ವಿ.ಸೀನಾ ಬಿನ್ ಲೇ॥ವೆಂಕಟಪ್ಪ ರವರು ಸಹಾಯಕ ಕಂದಾಯ ಅಧಿಕಾರಿ (ಚಾಮರಾಜಪೇಟೆ)ರವರಿಗೆ ಮನವಿಯನ್ನು ಸಲ್ಲಿಸಿ, ದಿ॥ಯಲ್ಲಿಯವರ ವಾರಸ್ಸುದಾರರಾದ ವಿ.ಸೀನಾ ರವರಿಗೆ ವಸತಿಗೃಹ ಸಂಖ್ಯೆ:8 ಈ ಸ್ವತ್ತಿನ ಹಕ್ಕುಪತ್ರವನ್ನು ಮಂಜೂರು ಮಾಡುವಂತೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಅದೇ ಸ್ವತ್ತಿನ ಸಂಖ್ಯೆ:8, ಪೌರಕಾರ್ಮಿಕರ ವಸತಿ ಗೃಹಕ್ಕೆ ವಿ.ಸೀನಾ ರವರ ಅಣ್ಣನ ಮಗನಾದ (ಶ್ರೀಮತಿ. ಯಲ್ಲಿ ಯವರ ಮೊಮ್ಮಗ) ಮಂಜುನಾಥ್ ಬಿನ್ ಲೇ॥ಫಕೀರಪ್ಪ ರವರು ಸಹಾಯಕ ಕಂದಾಯ ಅಧಿಕಾರಿ (ಚಾಮರಾಜಪೇಟೆ)ರವರಿಗೆ ಮನವಿಯನ್ನು ಸಲ್ಲಿಸಿ, ನಮ್ಮ ಅಜ್ಜಿಯಾದ ಶ್ರೀಮತಿ.ಯಲ್ಲಿ ಯವರು ಮರಣ ಹೊಂದಿದ್ದು, ವಸತಿ ಗೃಹದ ಸಂಖ್ಯೆ:8 ಈ ಸ್ವತ್ತಿನ ಹಕ್ಕುಪತ್ರವನ್ನು ಇವರ ಹೆಸರಿಗೆ ಮಂಜೂರು ಮಾಡುವಂತೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಈ ಬಗ್ಗೆ ಸಹಾಯಕ ಕಂದಾಯ ಅಧಿಕಾರಿ(ಚಾಮರಾಜಪೇಟೆ)ರವರು ಕಂದಾಯ ಪರಿವೀಕ್ಷಕರೊಂದಿಗೆ ದಿನಾಂಕ:03-08-2011 ರಂದು ಸ್ಥಳ ಪರಿಶೀಲಿಸಿ ಸ್ಥಳದ ಮಹಜರ್ ನಡೆಸಿ, ಈ ಆಸ್ತಿಯ ಪೌರಕಾರ್ಮಿಕರಿಗೆ 50-ವರ್ಷಗಳ ಹಿಂದೆ ಮಂಜೂರಾಗಿರುವ 32-ವಸತಿ ಗೃಹ ನಿವಾಸಿಗಳ ವಿವರಗಳ ಪಟ್ಟಿಯಲ್ಲಿ ನಂ:08 ಭಕ್ಷಿಗಾರ್ಡನ್, ಯಲ್ಲಿ (ನಲ್ಲಮ್ಮ ಕೋಂ ವೆಂಕಟಪ್ಪ) ರವರಿಗೆ ಮಂಜೂರು ಆಗಿದ್ದು, ಇವರು ದಿ:01-10-2005 ರಲ್ಲಿ ಮರಣ ಹೊಂದಿದ್ದು, ಮರಣ ಪ್ರಮಾಣ ಪತ್ರವನ್ನು ಲಗತ್ತಿಸಲಾಗಿದೆ. ಯಲ್ಲಿ ರವರಿಗೆ ಒಟ್ಟು 08-ಜನ ಮಕ್ಕಳಿದ್ದು, **1ನೇ ಫಕೀರಪ್ಪ, 2ನೇ ನಂಜುಂಡ, 3ನೇ ಮುನಿಯಪ್ಪ, 4ನೇ ಪಾರ್ವತಿ, 5ನೇ ಲಕ್ಷ್ಮಿ(ಪೌವತಿ), 6ನೇ ಸೀನಾ, 7ನೇ ಸರಸ್ವತಿ, 8ನೇ ವರಲಕ್ಷ್ಮೀ ಎಂಬುದಾಗಿ ಮಕ್ಕಳಿದ್ದು, ಇವರು ಬೇರೆ ಬೇರೆ ವಾಸ ಮಾಡುತ್ತಿದ್ದಾರೆ ಎಂಬುದಾಗಿ ಅಲ್ಲಿಯ ವಸತಿ ಗೃಹದ ನಿವಾಸಿಗಳು ತಿಳಿಸಿರುತ್ತಾರೆ. ವಸತಿ ಗೃಹ ಸಂಖ್ಯೆ:8 ರಲ್ಲಿ ವಿ.ಸೀನಾ ಮತ್ತು ಮಂಜುನಾಥ್ ರವರು ವಾಸ ಮಾಡುತ್ತಿರುವುದಾಗಿ ಸಹ ತಿಳಿಸಿರುತ್ತಾರೆ.**

ಇವರಿಬ್ಬರೂ ಸಲ್ಲಿಸಿರುವ ಮನವಿಗಳ ಹಾಗೂ ದಾಖಲೆಗಳ ಬಗ್ಗೆ ದಿನಾಂಕ:08-08-2011 ರಲ್ಲಿ ಸಹಾಯಕ ಕಂದಾಯ ಅಧಿಕಾರಿ(ಚಾಮರಾಜಪೇಟ)ರವರು ಶ್ರೀ ವಿ.ಸೀನಾ ಅಲಿಯಾಸ್ ಶ್ರೀನಿವಾಸ್ ಮತ್ತು ಶ್ರೀ ಮಂಜುನಾಥ್ ರವರಿಗೆ ಹಿಂಬರಹವನ್ನು ಜಾರಿ ಮಾಡಿ ಸ್ವತ್ತಿನ ಸಂಖ್ಯೆ:8 ಪೌರಕಾರ್ಮಿಕರ ವಸತಿಗೃಹ ಈ ಸ್ವತ್ತಿಗೆ ಇಬ್ಬರು ಅರ್ಜಿಗಳನ್ನು ಸಲ್ಲಿಸಿ, ಹಕ್ಕು ಪತ್ರ ಮತ್ತು ಕ್ರಯಪತ್ರ ಕೋರಿರುವುದರಿಂದ ನಿಮ್ಮಿಬ್ಬರಲ್ಲಿ ಯಾರಿಗೆ ಹಕ್ಕು ಪತ್ರ ನೀಡಬೇಕೆಂದು ಸ್ಪಷ್ಟವಾಗಿ ತಿಳಿಸಿದ್ದಲ್ಲಿ ತಮ್ಮ ಮನವಿಯನ್ನು ಪರಿಗಣಿಸಲಾಗುವುದು ಎಂದು ತಿಳಿಸಿರುತ್ತಾರೆ.

ಅದರಂತೆ, ದಿನಾಂಕ:08-08-2011 ರ ಹಿಂಬರಹಕ್ಕೆ ಪ್ರತ್ಯುತ್ತರವಾಗಿ ದಿನಾಂಕ:22-07-2013 ರಂದು ಸಹಾಯಕ ಕಂದಾಯ ಅಧಿಕಾರಿ(ಚಾಮರಾಜಪೇಟೆ) ರವರ ಕಛೇರಿಗೆ ವಿ.ಸೀನಾ ಬಿನ್ ವೆಂಕಟಪ್ಪ ಮತ್ತು ಮಂಜುನಾಥ್ ಬಿನ್ ಲೇ॥ಫಕೀರಪ್ಪ ರವರು ಅರ್ಜಿಯನ್ನು ಮತ್ತು ನೋಟರಿಯವರಿಂದ ಪ್ರಮಾಣ ಪತ್ರವನ್ನು ಸಲ್ಲಿಸಿ ಜಂಟಿಯಾಗಿ ಹಕ್ಕುಪತ್ರ ಹಂಚಿಕೆ ಮಾಡಬೇಕೆಂದು ಕೋರಿರುತ್ತಾರೆ. ಇದರೊಂದಿಗೆ ದಿನಾಂಕ:31-07-2013 ರಂದು ಶ್ರೀಮತಿ.ಯಲ್ಲಿಯ ಮಕ್ಕಳಾದ 6 ಜನರು ವಿ.ಸೀನಾ ಮತ್ತು ಮಂಜುನಾಥನಿಗೆ ಹಕ್ಕುಪತ್ರ ಹಂಚಿಕೆ ಮಾಡಲು ನಮ್ಮೆಲ್ಲರ ಒಪ್ಪಿಗೆ ಇದ್ದು, ನಮ್ಮಗಳ ಯಾವುದೇ ತಂಟೆ-ತಕರಾರು ಇರುವುದಿಲ್ಲ ಎಂದು ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತಾರೆ.

ಈ ಬಗ್ಗೆ ವಲಯಾಧಿಕಾರಿಗಳು ಸರ್ಕಾರದ ಪತ್ರದ ದಿ:03-01-2011 ರ ಆದೇಶವು ಹೊಸದಾಗಿ ಯಾವುದೇ ಸ್ವಾಧೀನಪತ್ರವನ್ನು ನೀಡಬಾರದೆಂದು ಆದೇಶವಿರುತ್ತದೆ. ಆದರೆ, ಸದರಿ ಅರ್ಜಿದಾರರಾದ ಶ್ರೀಮತಿ.ಯಲ್ಲಿ ಅಲಿಯಾಸ್ ನಲ್ಲಮ್ಮರವರಿಗೆ ಈಗಾಗಲೇ ನಗರಪಾಲಿಕೆಯ ವಸತಿ ಗೃಹದ ಸಂಖ್ಯೆ:8ನ್ನು ಹಂಚಿಕೆಯಾಗಿದ್ದು, ಇದಕ್ಕೆ ಸಂಬಂಧಪಟ್ಟ ಮೊತ್ತವನ್ನು ಸದರಿಯವರು 2004ನೇ ಸಾಲಿನಲ್ಲಿ ವಸತಿಗೃಹದ ಕ್ರಯದ ಬಾಬ್ತು 2000/- ರೂ.ಗಳನ್ನು ಪಾಲಿಕೆಗೆ ಪಾವತಿಸಿರುತ್ತಾರೆ. ಸದರಿರವರು 2005 ರಲ್ಲಿ ಮೃತರಾಗಿರುತ್ತಾರೆ. ಈ ಸಂಬಂಧ 2005ನೇ ಸಾಲಿನಿಂದ 2010ನೇ ಸಾಲಿನವರೆಗೆ ಕಡತವು ಚಾಲ್ತಿಯಲ್ಲಿರುತ್ತದೆ.

ಮೃತರ ವಾರಸ್ಸುದಾರರಾದ ಶ್ರೀ ವಿ.ಸೀನಾ ಅಲಿಯಾಸ್ ಶ್ರೀನಿವಾಸ್ ಮತ್ತು ಫಕೀರಪ್ಪರವರ ಮಗನಾದ ಮಂಜುನಾಥ್ (ಮೊಮ್ಮಗ)ರವರಿಗೆ ಜಂಟಿಯಾಗಿ ಸ್ವಾಧೀನಪತ್ರ/ ಕ್ರಯಪತ್ರವನ್ನು ನೀಡುವಂತೆ ಸಹಾಯಕ ಕಂದಾಯ ಅಧಿಕಾರಿ(ಚಾಮರಾಜಪೇಟೆ)ರವರು ಶಿಫಾರಸ್ಸು ಮಾಡಿರುತ್ತಾರೆ.

ಈ ಬಗ್ಗೆ ಕಾನೂನುಕೋಶದ ಮುಖ್ಯಸ್ಥರ ಅಭಿಪ್ರಾಯವನ್ನು ಕೋರಲಾಗಿ, ಕಡತದ ಕಂಡಿಕೆ 58ರಲ್ಲಿ ಉಪ ಕಾನೂನು ಅಧಿಕಾರಿರವರು "ಪ್ರಶ್ನಿತ ಪ್ರದೇಶದ ವಸತಿಗೃಹಗಳಲ್ಲಿ ವಾಸಿಸುತ್ತಿದ್ದ ಫಲಾನುಭವಿಗಳ ಪೈಕಿ 18 ಫಲಾನುಭವಿಗಳಿಗೆ 2004 ರಲ್ಲಿ ಹಕ್ಕುಪತ್ರ ನೀಡಿರುವುದಾಗಿ ಹಾಗೂ 8ನೇ ನಂಬರಿನ ವಸತಿಗೃಹವನ್ನು ಶ್ರೀಮತಿ.ಯಲ್ಲಿ ಅಲಿಯಾಸ್ ನಲ್ಲಮ್ಮರವರಿಗೆ ಹಂಚಿಕೆಯಾಗಿರುವುದಾಗಿ ವರದಿಸಲಾಗಿದ್ದು, 2004ನೇ ಸಾಲಿನಲ್ಲಿ ವಸತಿಗೃಹ ಕ್ರಯ ಬಾಬ್ತು ರೂ.2000/-ಗಳನ್ನು ಪಾಲಿಕೆಗೆ ಪಾವತಿಸಿರುವುದಾಗಿ ನಮೂದಾಗಿದ್ದು, 2005ನೇ ಸಾಲಿನಲ್ಲಿ ಸದರಿಯವರು ಮರಣ ಹೊಂದಿರುವ ಬಗ್ಗೆ ಕಡತದಲ್ಲಿ ಲಗತ್ತಿಸಿರುವ ಮರಣ ಪ್ರಮಾಣ ಪತ್ರದ ಮೂಲಕ ಗಮನಿಸಬಹುದಾಗಿದ್ದು, 2005ನೇ ಸಾಲಿನಿಂದ 2010ನೇ ಸಾಲಿನವರೆಗೆ ಕಡತಕ್ಕೆ ಚಾಲನೆ ನೀಡದೇ 2010ನೇ ಸಾಲಿನಲ್ಲಿ ಮೃತರ ವಾರಸುದಾರರೆಂದು ಶ್ರೀ ಸಿ.ಸೀನಾ ಅಲಿಯಾಸ್ ಶ್ರೀನಿವಾಸ ಮತ್ತು ಮಂಜುನಾಥ್ ಎಂಬುವವರು ಪ್ರಶ್ನಿತ ವಸತಿ ಗೃಹದ ಸ್ವಾಧೀನ ಪತ್ರ ನೀಡಲು ಕೋರಿಕೊಂಡಿರುವುದು ಕಂಡು ಬರುತ್ತದಲ್ಲಾದೆ 32 ಫಲಾನುಭವಿಗಳ ಪೈಕಿ 18 ಫಲಾನುಭವಿಗಳಿಗೆ 2004ನೇ ಸಾಲಿನಲ್ಲಿ ಹಕ್ಕುಪತ್ರ ನೀಡಲಾಗಿದ್ದು, ಉಳಿದ ಫಲಾನುಭವಿಗಳಿಗೆ ಹಕ್ಕುಪತ್ರ ನೀಡದಿರುವುದು ಕಂಡುಬರುತ್ತಿರುವುದಿಲ್ಲ. ಸ್ಥಳ ಅಭಾವದಿಂದಾಗಿ ಕೊಳಚೆ ಪ್ರದೇಶಗಳಲ್ಲಿ ಕಟ್ಟಡಗಳನ್ನು ಲಂಭಾಕಾರವಾಗಿ ನಿರ್ಮಿಸಿ ಕೊಳಚೆ ನಿವಾಸಿಗಳಿಗೆ ಹಂಚಿಕೆ ಮಾಡಲು ಸರ್ಕಾರದ ವತಿಯಿಂದ ಕಾರ್ಯಕ್ರಮ ರೂಪಿಸಿ ತಕ್ಷಣದಿಂದ ಜಾರಿಗೆ ಬರುವಂತೆ ದಿ:03-01-2010 ರ ಸರ್ಕಾರದ ಆದೇಶ ಸಂಖ್ಯೆ:ಯುಡಿಡಿ 122 ಎಂಎನ್‌ಜಿ 2009ನ್ನು ಹಿಂಪಡೆದು ದಿ:24-01-2011ರಂದು ಸಂಖ್ಯೆ:ಯುಡಿಡಿ 176 ಸಿಎಸ್‌ಎಸ್ 2010 ರಲ್ಲಿ ಸರ್ಕಾರದ ಆದೇಶ ಹೊರಡಿಸಿ ಹೊಸದಾಗಿ ಸ್ವಾಧೀನ ಪತ್ರ ನೀಡದಂತೆ ಆದೇಶಿಸಿರುವುದು ಕಂಡು ಬಂದಿರುತ್ತದೆ ಎಂದು ಕಾನೂನು ಕೋಶದ ಮುಖ್ಯಸ್ಥರು ವರದಿಸಿ," ಭಕ್ಷಿಗಾರ್ಡನ್‌ನ ಪೌರಕಾರ್ಮಿಕರ ವಸತಿ ಗೃಹಗಳನ್ನು ಸರ್ಕಾರದ ಆದೇಶ ಸಂಖ್ಯೆ:ನಅಇ 20 ಎಂಎನ್‌ಜಿ 99, ದಿ:17-02-2004 ರ ಆದೇಶದಂತೆ ಈಗಾಗಲೇ 32 ಫಲಾನುಭವಿಗಳ ಪೈಕಿ 29 ಫಲಾನುಭವಿಗಳಿಗೆ ಹಂಚಿಕೆ ಮಾಡಿರುವುದು ಕಂಡುಬಂದಿರುವುದರಿಂದ, ಈ ಬಗ್ಗೆ ಸಕ್ಷಮ ಪ್ರಾಧಿಕಾರದ ಹಂತದಲ್ಲಿ ನಿರ್ಧರಿಸಬಹುದಾಗಿದೆಯೆಂದು ಅಭಿಪ್ರಾಯ ನೀಡಿರುತ್ತಾರೆ.

ಆದುದರಿಂದ, ವಸತಿ ಗೃಹದ ಸಂಖ್ಯೆ:8ರ ಸ್ವತ್ತಿನ ಒಟ್ಟು ವಿಸ್ತೀರ್ಣ 10½ x 21 ಅಡಿಗಳ ವಿಸ್ತೀರ್ಣಕ್ಕೆ ಶ್ರೀ ವಿ.ಸೀನಾ ಅಲಿಯಾಸ್ ಶ್ರೀನಿವಾಸ ಮತ್ತು ಶ್ರೀ ಮಂಜುನಾಥ್ ರವರಿಗೆ ವಲಯಾಧಿಕಾರಿಗಳು ಜಂಟಿ ಹಂಚಿಕೆಗೆ ಶಿಫಾರಸ್ಸು ಮಾಡಿರುತ್ತಾರೆ.

**ಕಾನೂನು ಕೋಶದ ಮುಖ್ಯಸ್ಥರು** ಭಕ್ಷಿಗಾರ್ಡನ್‌ನ ಪೌರಕಾರ್ಮಿಕರ ವಸತಿ ಗೃಹಗಳನ್ನು ಸರ್ಕಾರದ ಆದೇಶ ಸಂಖ್ಯೆ: ನಅಇ 20 ಎಂಎನ್‌ಜಿ 99, ದಿ:17-02-2004 ರಂತೆ ಈಗಾಗಲೇ 32 ಫಲಾನುಭವಿಗಳ ಪೈಕಿ 29 ಫಲಾನುಭವಿಗಳಿಗೆ ಹಂಚಿಕೆ ಮಾಡಿರುವುದು ಕಂಡುಬಂದಿರುವುದಾಗಿ, ಹಾಗೂ ಘನ ಸರ್ಕಾರದ ದಿ:24-01-2011 ರಂದು ಸಂಖ್ಯೆ:ಯುಡಿಡಿ 176 ಸಿಎಸ್‌ಎಸ್ 2010 ರಲ್ಲಿ ಆದೇಶ ಹೊರಡಿಸಿ ಹೊಸದಾಗಿ ಸ್ವಾಧೀನ ಪತ್ರ ನೀಡದಂತೆ ಆದೇಶಿಸಿರುವುದರ ಬಗ್ಗೆ ಅಭಿಪ್ರಾಯಿಸಿ ಈ ಬಗ್ಗೆ ಸಕ್ಷಮ ಪ್ರಾಧಿಕಾರದ ಹಂತದಲ್ಲಿ ನಿರ್ಧರಿಸಬಹುದೆಂದು ಅಭಿಪ್ರಾಯಿಸಿರುವುದರಿಂದ, ಈ ಅಭಿಪ್ರಾಯದಂತೆ ತಹಶೀಲ್ದಾರ್ ರವರು ಸಲ್ಲಿಸಿರುವ ಸರ್ವೈವಲ್ (Survival) ಸರ್ಟಿಫಿಕೇಟ್ ಆಧರಿಸಿ ಜಂಟಿ ಖಾತೆಯನ್ನು ಇರಿಸುವ ಬಗ್ಗೆ (ಎಲ್ಲಾ ವಾರಸುದಾರರ ಹೆಸರಿನೊಂದಿಗೆ) ಮೇಲಿನ ಅಂಶಗಳನ್ನು ಸೂಕ್ತ ತೀರ್ಮಾನಕ್ಕಾಗಿ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ, ಪಾಲಿಕೆ ಸಭೆ ಮಂಡಿಸಿಕೊಂಡು ಸಕ್ಷಮ ಪ್ರಾಧಿಕಾರವಾದ ಘನಸರ್ಕಾರದ ಮುಂದೆ ಮಂಡಿಸುವ ಸಲುವಾಗಿ ಸಲ್ಲಿಸಲಾದ **"ಪ್ರಸ್ತಾಪಿತ ಪ್ರಕರಣಕ್ಕೆ ಸಂಬಂಧಿಸಿದಂತೆ, ಈಗಾಗಲೇ 32 ಫಲಾನುಭವಿಗಳ ಪೈಕಿ 29 ಫಲಾನುಭವಿಗಳಿಗೆ ಹಕ್ಕುಪತ್ರ ನೀಡಲಾಗಿರುವುದರಿಂದ ಕಾನೂನು ಕೋಶದ ಮುಖ್ಯಸ್ಥರು ಅಭಿಪ್ರಾಯಿಸಿರುವಂತೆ ತಹಶೀಲ್ದಾರ್ ರವರು ಸಲ್ಲಿರುವ ಸರ್ವೈವಲ್ (Survival) ಸರ್ಟಿಫಿಕೇಟ್ ಆಧರಿಸಿ ಪೌರಕಾರ್ಮಿಕ ವಸತಿಗೃಹ ಸಂಖ್ಯೆ: 08 ಅನ್ನು ಮಂಜುನಾಥ್ ಬಿನ್ ಲೇ॥ ಫಕೀರಪ್ಪ ಮತ್ತು ವಿ.ಸಿನಾ ಬಿನ್ ಲೇ॥ ವೆಂಕಟಪ್ಪ ರವರ ಹೆಸರಿಗೆ ಜಂಟಿ ಖಾತೆಯನ್ನು ಇರಿಸುವ ಕುರಿತಂತೆ ವಿಶೇಷ ಆಯುಕ್ತರು (ಯೋಜನೆ) ರವರು ಮಂಡಿಸಿರುವ ದಿನಾಂಕ:11-03-2016ರ ಟಿಪ್ಪಣಿಯನ್ನು ಒಪ್ಪಲು**

**ತೀರ್ಮಾನಿಸಿರುವ ನಗರ ಯೋಜನೆ ಮತ್ತು ಅಭಿವೃದ್ದಿ ಸ್ಥಾಯಿ ಸಮಿತಿಯ ದಿನಾಂಕ: 26.04.2016ರ ಸಭೆಯ ನಿರ್ಣಯ "**

**ನಿರ್ಣಯ: ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿಯ ದಿನಾಂಕ: 26.04.2016ರ ಸಭೆಯ ನಿರ್ಣಯವನ್ನು ಒಪ್ಪುತ್ತಾ, ಕಾನೂನು ಕೋಶದ ಮುಖ್ಯಸ್ಥರು ಅಭಿಪ್ರಾಯಿಸಿರುವಂತೆ ಕ್ರಮವಹಿಸುವುದೆಂದು ಸಮಿತಿಯು ತೀರ್ಮಾನಿಸಿತು.**

***ಹೆಚ್ಚುವರಿ ವಿಷಯ:-***

***01]. ವಿಷಯದ ಸಂಖ್ಯೆ: ತೆಆಸ್ಥಾಸ/11/2016-17***

ಆಯುಕ್ತರ ದಿನಾಂಕ: 10.05.2016ರ ಟಿಪ್ಪಣಿಯಲ್ಲಿ ಪ್ರಸ್ತಾಪಿಸಿರುವಂತೆ, ಶ್ರೀ.ರಾಕ್‌ಲೈನ್ ವೆಂಕಟೇಶ್, ಪ್ರಧಾನ ಕಾರ್ಯದರ್ಶಿ, ಕರ್ನಾಟಕ ಚಲನಚಿತ್ರ ಕಲಾವಿದರ ಸಂಘ(ರಿ), ನಂ.5, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-18 ರವರು ಪೂಜ್ಯ ಮಹಾಪೌರರರಿಗೆ ಮನವಿ ಸಲ್ಲಿಸಿ. ತಮ್ಮ ಸಂಘದ ಕಟ್ಟಡವು ಚಾಮರಾಜಪೇಟೆಯಲ್ಲಿ ನಿರ್ಮಾಣವಾಗುತ್ತಿದ್ದು, ಸದರಿ ಕಟ್ಟಡದ ನಿರ್ಮಾಣಕಾರ್ಯವನ್ನು ಪೂರ್ಣಗೊಳಿಸಲು ಮಹಾನಗರ ಪಾಳಿಕೆಯಿಂದ 1 ಕೋಟಿ ಹಣವನ್ನು ಬಿಡುಗಡೆ ಮಾಡಲು ಕೋರಿರುತ್ತಾರೆ. ಪೂಜ್ಯ ಮಹಾಪೌರರು ಪಾಲಿಕೆಯ 2016-17ನೇ ಸಾಲಿನ ಆಯವ್ಯಯದಲ್ಲಿ ರೂ.100.00ಲಕ್ಷಗಳನ್ನು ಬಿಡುಗಡೆ ಮಾಡಲು ಅನುದಾನ ಮೀಸಲಿರಿಸಿದೆ. ಸದರಿ ಆಯವ್ಯಯಕ್ಕೆ ಸರ್ಕಾರದ ಅನುಮೋದನೆಗಾಗಿ ಸಲ್ಲಿಸಲಾಗಿರುತ್ತದೆ. ಪ್ರಸ್ತುತ ಸದರಿ ಪ್ರಸ್ತಾವನೆಯು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಗಾಗಿ ಮಂಡಿಸಲು ತೀರ್ಮಾನಿಸಲಾಗಿರುತ್ತದೆ. ಕರ್ನಾಟಕ ಚಲನಚಿತ್ರ ಕಲಾವಿದರ ಸಂಘದವರು ತುರ್ತಾಗಿ ಅನುದಾನವನ್ನು ಬಿಡುಗಡೆ ಮಾಡಲು ಕೋರಿರುವ ಮೇರೆಗೆ, ಪಾಲಿಕೆಯ 2016-17ನೇ ಸಾಲಿನ ಆಯವ್ಯಯಕ್ಕೆ ಸರ್ಕಾರದ ಅನುಮೋದನೆ ಮತ್ತು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಅನುಮೋದನೆಯನ್ನು ನಿರೀಕ್ಷಿಸಿ, 100.00 ಲಕ್ಷಗಳ ಅನುದಾನವನ್ನು ಮಂಜೂರು ಮಾಡಲು ಶಿಫಾರಸ್ಸು ಮಾಡಿರುತ್ತಾರೆ.

ಮುಂದುವರೆದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2016-17ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ ಪಿ-3159ರ ಅಡಿಯಲ್ಲಿ ಕನ್ನಡ ಚಲನಚಿತ್ರ ಕಲಾವಿದರ ಸಂಘದ ಕಟ್ಟಡಕ್ಕೆ ರೂ.100.00 ಲಕ್ಷಗಳ ಅನುದಾನ ಮೀಸಲಿರಿಸಲಾಗಿರುತ್ತದೆ.

ಕರ್ನಾಟಕ ಚಲನಚಿತ್ರ ಕಲಾವಿದರ ಸಂಘ(ರಿ) ರವರಿಗೆ ರೂ.100.00 ಲಕ್ಷಗಳ ಅನುದಾನವನ್ನು ಪೂಜ್ಯ ಮಹಾಪೌರರು ಮತ್ತು ಮಾನ್ಯ ಆಯುಕ್ತರ ರವರ ಆದೇಶದಂತೆ, ಸರ್ಕಾರದ ಅನುಮೋದನೆ ಮತ್ತು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ ಘಟನೋತ್ತರ ನಿರ್ಣಯ ನಿರೀಕ್ಷಿಸಿ ಮಂಜೂರು ಮಾಡಿರುವುದರಿಂದ, **ಘಟನೋತ್ತರ ನಿರ್ಣಯದ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯ** ಮುಂದೆ ಮಂಡಿಸಿರುವ ಟಿಪ್ಪಣಿ.

**ನಿರ್ಣಯ: ಆಯುಕ್ತರ ದಿನಾಂಕ: 10.05.2016ರ ಟಿಪ್ಪಣಿಯನ್ನು ಒಪ್ಪುವುದೆಂದು ಸಮಿತಿಯು ತೀರ್ಮಾನಿಸಿತು.**

(ಎಮ್. ಶಿವರಾಜು)
**ಅಧ್ಯಕ್ಷರು**
**ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ**